ಯಾರು ಏನೇ ಮಾತನಾಡಿದರೂ ಅದು ಕಡತಕ್ಕೆ ಹೋಗುವುದಿಲ್ಲ, ಪತ್ರಿಕೆಯವರೂ ಕೂಡ ಅದನ್ನು ಗಮನಿಸಬೇಕಾದ ಅಗತ್ಯ ಇಲ್ಲ. ಅವರು ತಮ್ಮ ಸ್ಥಾನದಲ್ಲಿ ಕುಳಿತು ಹೇಳಿರುವುದರಲ್ಲಿ ಏನಾದರೂ ಅಬ್ಜೆಕ್ಷನ್ಸ್ ಬಂದರೆ ನಾನು ಕಡತವನ್ನು ತರಿಸಿ ನೋಡುತ್ತೇನೆ.

ಹಕ್ಕುಚ್ಯುತಿ ಪ್ರಸ್ತಾವ

3) ಬೆಂಗಳೂರು ದೂರದರ್ಶನದಲ್ಲಿ ಸದನದ ಕಾರ್ಯಕಲಾಪಗಳ ಬಗ್ಗೆ ಸರಿಯಾಗಿ ಪ್ರಸಾರ ಮಾಡದೇ ಇರುವುದು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ 18ನೇ ತಾರೀಖಿನಂದು ಆಯವ್ಯಯ ಮಂಡನೆಯಾಯಿತು. ದೂರದರ್ಶನದವರ ನೇರಪ್ರಸಾರ ಎಂದು ಹೇಳಿ ನಮಗೆ ಬಹಳ ಸಂತೋಷವಾಯಿತು. ಏತಕ್ಕೆಂದರೆ ಈ ಸದನದಲ್ಲಿ ಪ್ರಪ್ರಥಮವಾಗಿ ದೂರದರ್ಶನದವರು ನೇರ ಪ್ರಸಾರವನ್ನು ಮಾಡತಕ್ಕಂಥದ್ದು ಇದು ಒಳ್ಳೆಯ ಸಂಪ್ರಾದಾಯ ಮತ್ತು ಒಳ್ಳೆಯ ಅಧ್ಯಾಯವನ್ನು ತಾವು ಆರಂಭಮಾಡಿದಿರಿ. ಮತ್ತೆ ದೂರದರ್ಶನವಲ್ಲದೆ ಖಾಸಗೀ ದೂರದರ್ಶನದವರಿಗೂ ಇಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ, ತಮ್ಮ ಆ ಒಂದು ಔದಾರ್ಯ ನಾವು ಅತ್ಯಂತ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಆದರೆ ನಾನು ನೇರವಾಗಿ ಬೆಂಗಳೂರು ದೂರದರ್ಶನ ಆ ನೇರ ಪ್ರಸಾರವನ್ನು ಮಾಡುವಾಗ, ಅವರು ಈ ಸಭೆ ಎಂದರೆ ಏನು ಎನ್ನುವಂಥಾದ್ದನ್ನು ಮರೆತರು. ಈ ಸಭೆಯಲ್ಲಿ ಕೇವಲ ಆಡಳಿತ ಪಕ್ಷದವರ ಪರವಾಗಿ ಆಯವ್ಯಯವನ್ನು ಮಂಡಿಸುತ್ತಿದ್ದಾರೇನೋ ಎನ್ನುವಂಥ ಭಾಸ ಅವರಿಗೆ ಆಗಿರಬಹುದು. ಈ ಸದನದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧಪಕ್ಷದವರು ಇದ್ದರೆ. ಈ ಮಧ್ಯೆ ಆಯವ್ಯಯ ಮಂಡನೆಯಾಗುತ್ತಿದೆನ್ನುವಂಥಾದ್ದು ಮತ್ತು ಇದು ಅತ್ಯಂತ ಪ್ರಾಮುಖ್ಯವಾದಂತಹ ಸಂದರ್ಭವಾಗಿದೆ. ಈ ಸಂದರ್ಭದಲ್ಲಿ ನಡೆದಂಥ ಪ್ರಸಂಗವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಆಯವ್ಯಯ ಮಂಡನೆಯಾದಾಗ ಒಂದು ಕಡೆ ಕಾಂಗ್ರೆಸ್ ಪಕ್ಷದವರು ನಿರಂತರವಾಗಿ ವಿರೋಧ ಮಾಡಿ ಸಭಾತ್ಯಾಗ ಮಾಡಿದರು. ಅವರು ಸಭಾತ್ಯಾಗವನ್ನು ಮಾಡುವಾಗ ಬಸ್ ದರ ಏರಿಕೆ, ಮತ್ತು ವಿದ್ಯುಚ್ಛಕ್ತಿಯ ದರವನ್ನು ಏರಿಸಿದ್ದೀರಿ. ಈ ರೀತಿಯಾಗಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತೆರಿಯಾಗಿ ಹೊರಗಡೆ ಹಾಕಿ ಮತ್ತೆ ತಾವು ಆಯವ್ಯಯವನ್ನು ಮಂಡಿಸುತ್ತಿದ್ದೀರಿ, ಈ ನೀತಿ ಸರಿಯಲ್ಲವೆಂದು ಹೇಳಿ ಅವರು ಸಭಾತ್ಯಾಗ ಮಾಡಿದರು. ಈ ಸಭಾತ್ಯಾಗಕ್ಕೆ ಮುಂಚೆ ಪ್ರಪ್ರಥಮವಾಗಿ ಆಯವ್ಯಯ ಮಂಡನೆಯಾದಂತಹ ಸಂದರ್ಭದಲ್ಲಿ ನಾನು ಎದ್ದು ಬಸ್ ದರ ಮತ್ತು ವಿದ್ಯುಚ್ಛಕ್ತಿಯ ದರದ ಬಗ್ಗೆ ಇದೆಲ್ಲಾ ಏರಿಕೆ ಮಾಡಿರುವಂಥದ್ದು ಅವರು

ತಂದಂತಹ ಆಯವ್ಯಯದ ಪ್ರತಿಯನ್ನು ಹರಿದು ಪ್ರತಿಭಟನೆಯನ್ನು ಮಾಡಿದೆವು.ಇದಾದ ನಂತರ ಆಯವ್ಯಯ ಪ್ರತಿಯನ್ನು ಹರಿದು ಪ್ರತಿಭಟನೆಯನ್ನು ಮಾಡಿದ್ದೆವು ಇದಾದ ನಂತರ ನನ್ನ ಜೊತೆಯಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷ, ಎಡಪಂತೀಯದ ಶ್ರೀ ಶ್ರೀರಾಮರೆಡ್ಡಿಯವರು, ರೈತ ಸಂಘದ ಮುಖಂಡರು ಆದಂತಹ ಶ್ರೀ ಪುಟ್ಟಣ್ಣಯ್ಯನವರು ನಾವೆಲ್ಲೂ ಒಟ್ಟಿಗೆ ಸೇರಿ ಧರಣಿ ಮಾಡಿದೆವು. ಇಡೀ ರಾಜ್ಯದಲ್ಲಿ ಅವರು ನೇರವಾಗಿ ಯಾರಿಗೆ ಹೆದರಿದರೋ ಎನೋ ಗೊತ್ತಾಗಲಿಲ್ಲ ಈ ನೇರ ಪ್ರಚಾರವೆಂದು ಹೇಳಿದರೆ ನಮ್ಮ ಸಂಪೂರ್ಣವಾದ ಪ್ರತಿಭಟನೆ, ಧರಣಿಯನ್ನು ಮುಚ್ಚಿಹಾಕಿದರು. ಈ ಕಡೆ ಮಾನ್ಯ ನಂಜೇಗೌಡರು, ಮಾನ್ಯ ವೈ.ರಾಮಕೃಷ್ಣರವರು, ಮಾನ್ಯ ಯಡಿಯೂರಪ್ಪನವರು ನಿಂತು ಅನ್ಯಾಯ ನಡೆದಿದೆ ಎಂದು ನಿರಂತರವಾಗಿ ಘೋಷಣೆ ಮಾಡಿದರು ಅದನ್ನೂ ಕೈ ಬಿಟ್ಟರು. ಅದೇ ರೀತಿಯಲ್ಲಿ ಕಾಂಗ್ರೆಸ್ ಪಕ್ಷದವರ ಸಭಾತ್ಯಾಗ, ಹಾಗೂ ನಮ್ಮ ಧರಣಿಯನ್ನು ಕೈ ಬಿಟ್ಟುರು. ಇದು ಒಂದು ರೀತಿಯಲ್ಲಿ ಪೂರ್ವಗ್ರಹ ಪೀಡಿತವಾಗುತ್ತಿರುವಂತಹ ದೂರದರ್ಶನವಾಗಿದೆ. ಈ ದೂರದರ್ಶನದ ಪ್ರಶ್ನೆಯ ಬಗ್ಗೆ ನಾನು ಹಕ್ಕುಚ್ಯುತಿಯನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ಇದಕ್ಕೆ ಸುಮಾರು 15 ಜನರು ಸಹಿ ಹಾಕಿದ್ದಾರೆ. ಅವರು ಯಾರ್ಯಾರು ಎಂದರೆ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ, ಮಾನ್ಯ ಯಡಿಯೂರಪ್ಪ, ಮಾನ್ಯ ನಂಜೇಗೌಡರು, ಮಾನ್ಯ ಕಾಗೋಡು ತಿಮ್ಮಪ್ಪ, ಮಾನ್ಯ ಧರ್ಮಸಿಂಗ್, ಮಾನ್ಯ ಬಿ. ಶಿವಪ್ಪನವರು, ಮಾನ್ಯ ವೈ ರಾಮಕೃಷ್ಣಪ್ಪರವರು, ಶ್ರೀ ಶ್ರೀರಾಮರೆಡ್ಡಿಯವರು, ಮಾನ್ಯ ಪುಟ್ಟಣ್ಣಯ್ಯ ಮಾನ್ಯ ಈಶ್ವಪರ್ಪನವರು, ಮಾನ್ಯ ಚಂದ್ರಕಾಂತ ಬೆಲ್ಲದರವರು, ಸಹಿ ಮಾಡಿದ್ದಾರೆ. ಇತ್ತೀಚಿನ ದಿವಸಗಳಲ್ಲಿ ಒಂದು ವರ್ಷದಿಂದ ಈಚೆಗೆ ಬೆಂಗಳೂರು ದೂರದರ್ಶನ ಸಂಪೂರ್ಣವಾಗಿ ಕುಲಗೆಟ್ಟಿದೆ. ಇದು ಒಂದು ರೀತಿಯ ಪೂರ್ವಗ್ರಹ ಪೀಡಿತವಾಗಿದೆ. ಈಗಾಗಲೇ ರಾಜ್ಯದಾದ್ಯಂತ ಮಂಡ್ಯದಲ್ಲಿ ಕಾವೇರಿ ಸಭೆ ನಡೆಯಿತು. ಈ ಕಾವೇರಿ ವಿಷಯವಾಗಿ ನಡೆದಂತಹ ಸಭೆ, ಹಿಂದೆ ರಾಜ್ಯಕ್ಕೆ ಸಂಬಂಧಪಟ್ಟಂತಹ ಸಭೆ ಮೆರವಣಿಗೆಗಳು ನಡೆದಾಗಲೆಲ್ಲಾ ಚಾಚುತಪ್ಪದೇ ಪ್ರತಿ ದಿನ ದೂರದರ್ಶನದಲ್ಲಿ ಪ್ರಚಾರ ಇತ್ತು. ಅವತ್ತಿನ ಸಭೆಯಲ್ಲೂ ಸಹ ನಾವೆಲ್ಲರೂ ಪ್ರತಿಭಟನೆ ಮಾಡಿದೆವು. ನಮ್ಮ ಹಿರಿಯ ಈ ಸಭೆಯ ಅಧ್ಯಕ್ಷರು ಆಗಿದ್ದಂತಹ ಮಾನ್ಯ ಎಸ್.ಎಂ. ಕೃಷ್ಣರವರು ಈ ಬಗ್ಗೆ ತೀವ್ರವಾಗಿ ದೂರದರ್ಶನದವರೊಡನೆ ಮಾತನಾಡಿ ಮತ್ತೆ ರಾಜ್ಯ ಸಭೆಯಲ್ಲೂ ಚರ್ಚೆ ಮಾಡುತ್ತೇನೆ ಎಂದಿದ್ದಾರೆ. ಈ ದೂರದರ್ಶನವರ ತಾರತಮ್ಯ ಮತ್ತು ಪೂರ್ವಗ್ರಹ ಪೀಡಿತ ವಿಚಾರವನ್ನು ರಾಜ್ಯಸಭೆಯಲ್ಲಿ ಪ್ರಸ್ತಾಪಿಸುವುದಾಗಿ ಹೇಳಿದರು. ನಾನು ಈಗಾಗಲೇ ಅವರೊಡನೆ ಸಂಪರ್ಕ ಮಾಡಿದ್ದೇನೆ. ಕೇಂದ್ರದಲ್ಲೂ ಮಾನ್ಯ

ಸಿ.ಎಂ.ಇಬ್ರಾಹಿಂರವರು ವಾರ್ತಾ ಸಚಿವರು ಆಗಿದ್ದಾರೆ. ಈ ರೀತಿಯಾದಂತಹ ಪೂರ್ವಗ್ರಹ ಪೀಡಿತರಾಗಿ ಆ ಸುದ್ದಿಗೆ ಕೊಡತಕ್ಕಂಥ ಅಪಪ್ರಚಾರ ವ್ಯಕ್ತಿತ್ವಕ್ಕೆ ಒಂದು ಅಪಪ್ರಚಾರವಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆ ದೃಷ್ಟಿಯಿಂದ ಇದು ಅತ್ಯಂತ ಗಮನವಾದಂತಹ ವಿಚಾರವಾಗಿದೆ. ಆ ದಿನ ನಡೆದಂತಹ ಕ್ಯಾಸೆಟ್ ಅನ್ನು ತಾವು ಹಕ್ಕುಚ್ಯುತಿ ಸಮಿತಿಗೆತರಿಸಬೇಕು. ಅಂದು ಪಕ್ಷಗಳ ಮುಖಂಡರುಗಳ ಸಂದರ್ಶನವೂ ಆಯಿತು. ಅಂದು ವಿರೋಧಪಕ್ಷದ ಮುಖಂಡರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ, ಮಾನ್ಯ ವೀರಪ್ಪಮೊಯಿಲಿಯವರ, ಮಾನ್ಯ ಯಡಿಯೂರಪ್ಪನವರ ಮತ್ತು ನನ್ನ ಸಂದರ್ಶನವನ್ನು ಮಾಡಿದರು. ಆದರೆ ರೈತ ಸಂಘದ ಮತ್ತು ಕಮ್ಯುನಿಸ್ಟ್ ಪಕ್ಷದವರ ಸಂದರ್ಶನವನ್ನು ಮಾಡಲೇ ಇಲ್ಲ. ಟಿ.ವಿಯ ಪ್ರದರ್ಶನ ಮಾಡುವಂಥಾದ್ದು ಏನು? ವಾಟಾಳ್ ನಾಗರಾಜ್‌ರವರು ಪ್ರತಿಸಾರಿಯೂ ದೂರದರ್ಶನ ವಿರುದ್ಧ ಹಕ್ಕುಚ್ಯುತಿಯನ್ನು ತರುತ್ತಿದ್ದಾರೆ. ದೂರದರ್ಶನದ ಬಗ್ಗೆ ಮಾತನಾಡುತ್ತಾರೆಂದು ಹೇಳಿ ನನ್ನ ಸಂದರ್ಶನವನ್ನು ಮಾಡಿ ಅದನ್ನು ಕೈ ಬಿಟ್ಟರು. ಇದರ ಉದ್ದೇಶ ಅವರು ಈ ತಾರತಮ್ಯವನ್ನು ಅವರ ಇಷ್ಟ ಬಂದ ಹಾಗೆ ಮಾಡಿಕೊಳ್ಳಲಿ. ಆದರೆ ನಾನು ಇವತ್ತು ಹೇಳುವುದೆನೆಂದರೆ ಮಾನ್ಯ ಸಿ. ಎಂ.ಇಬ್ರಾಹಿಂರವರು ಕೇಂದ್ರದಲ್ಲಿ ವಾರ್ತಾಸಚಿವರಾಗಿದ್ದಾರೆ. ಅವರು ನಾನು ಜೊತೆಯಾಗಿ ರಾಜಕೀಯಕ್ಕೆ ಬಂದಂಥವರು, ಇದು ಬಹಳ ಜನರಿಗೆ ಗೊತ್ತಿಲ್ಲ. ನಾನು ಇದನ್ನು ಅತ್ಯಂತ ಪ್ರೀತಿಯಿಂದ ಹೇಳುತ್ತೇನೆ. ಅದರ ಬಗ್ಗೆ ನನ್ನ ಮಾತು ಏನೂ ಇಲ್ಲ. ನಾನು ಈ ಬಗ್ಗೆ ಹೇಳುವುದೇನೆಂದರೆ ತೀವ್ರವಾದಂತಹ ಕ್ರಮವನ್ನು ಕೈಗೊಂಡಿಲ್ಲಯ ಇದು ಅತಿರೇಕವಾಗುತ್ತಿದೆ, ಇದು ಸರಿಯಲ್ಲ. ಹಿಂದೆ ಈ ರೀತಿಯಾಗಿ ಆಗಿರಲಿಲ್ಲ. ನಾನು ಭಾಷಣ ಮಾಡುವಾಗ ಅನೇಕ ಸಾರಿ ಹೇಳಿದ್ದೇನೆ. ಹಿಂದೆ ಇಷ್ಟು ತೀರಾ ಹದ್ದುಮೀರಿ ಹದಗೆಟ್ಟ ಪರಿಸ್ಥಿತಿ ನಿರ್ಮಾಣವಾಗಿರಲಿಲ್ಲ. ನಾನು ತಮಗೆ ಒಂದು ಮಾತನ್ನು ಕಳಕಳಿಯಿಂದ ಹೇಳುತ್ತಿದ್ದೇನೆ. ಇದನ್ನು ಸರಿಪಡಿಸುವಂತಹ ವ್ಯವಸ್ಥೆಯಾಗಬೇಕಾದರೆ ಕೇಂದ್ರಸರ್ಕಾರದ ಮೇಲೆ ನಾವು ಒತ್ತಡವನ್ನು ತರುತ್ತೇವೆ. ನಾವು ಯಾವ ಯಾವ ರೀತಿಯಲ್ಲಿ ಒತ್ತಡವನ್ನು ತರುತ್ತೇವೆಂದರೆ ಪಾರ್ಲಿಮೆಂಟ್ ಸದಸ್ಯರನ್ನು ಬೇಟಿ ಮಾಡುತ್ತೇವೆ. ನಾವು ಒಂದು ನಿಯೋಗವನ್ನು ದೆಹಲಿಗೆ ತೆಗೆದುಕೊಂಡು ಹೋಗುತ್ತೇವೆ. ಅಲ್ಲಿ ಯಾರ್ಯಾರನ್ನು ಭೇಟಿ ಮಾಡುತ್ತೇವೆ. ಅವರನ್ನು ಭೇಟಿ ಮಾಡುತ್ತೇವೆ. ತಮಿಳುನಾಡಿನಲ್ಲಿ ಏನಾಗಿದೆ ಎಂದರೆ ಅವರ ಸ್ಥಳೀಯ ಭಾಷೆಯಾದ ತಮಿಳು ಸುದ್ದಿಯನ್ನು ಎರಡು ಭಾರಿ ಪ್ರಚಾರ ಮಾಡುತ್ತಾರೆ. ಹಿಂದಿ ಸುದ್ದಿಯನ್ನು ತೆಗೆದಿದ್ದಾರೆ. ನಮ್ಮ ಕರ್ನಾಟಕದಲ್ಲಿ ಒಂದು ಸಾರಿ ಸಂಜೆ 7.00 ಗಂಟೆಗೆ ಸ್ಥಳೀಯ ಭಾಷೆ ಕನ್ನಡ ವಾರ್ತೆಯನ್ನು ಕೊಡುತ್ತಾರೆ. ಅದರಲ್ಲೂ ಸಹ ಶೇ. 70-80 ಭಾಗದಷ್ಟು ಕೇಂದ್ರ ಸರ್ಕಾರದ ಸುದ್ದಿಯೇ ಇರುತ್ತದೆ. ರಾಜ್ಯದ ಸುದ್ದಿ

ಒಂದು ನಿಮಿಷವೂ ಇರುವುದಿಲ್ಲ. ಕೇಂದ್ರದ ಸುದ್ದಿ ನಮಗೆ ಏಕೆ ಬೇಕು? ನಮ್ಮ ರಾಜ್ಯದ ಸಮಗ್ರವಾದ ಸುದ್ದಿಯನ್ನು ಕೊಡದಿದ್ದ ಮೇಲೆ ಈ ಸುದ್ದಿ ನಮಗೇಕೆ ಬೇಕು? ಅದು ನಮಗೆಬೇಕಾಗಿಲ್ಲ.

ಅಧ್ಯಕ್ಷರು : ಈಗ ತಾವು ಹಕ್ಕುಚ್ಯುತಿ ನಿರ್ಣಯವನ್ನು ಪ್ರಾಸ್ತಾವಿಕವಾಗಿಮಂಡನೆ ಮಾಡುವುದಕ್ಕಾಗಿ ಸಲ್ಲಿಸುತ್ತಿದ್ದೀರಿ. ನಿಮ್ಮ ಹಕ್ಕಿಗೆ ಯಾವ ರೀತಿಯಲ್ಲಿ ಚ್ಯುತಿ ಬಂದಿದೆ ಎಂಬ ಬಗ್ಗೆ ಸಮರ್ಥನೆ ಮಾಡಬೇಕಲ್ಲಾ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದ್ದೇನೆ. ಇಲ್ಲಿ ಇಡೀ ವಿರೋಧಪಕ್ಷದವರನ್ನು ಕಡೆಗಾಣಿಸಿ.... ಮಾನ್ಯ ಭೈರೇಗೌಡರೇ ಇದನ್ನು ತಾವು ತೀವ್ರವಾಗಿ ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಿ,ಇದು ಏನು ದೊಂಬರಾಟವಲ್ಲ, ತಾವು ಹಿರಿಯ ಸಚಿವರಾಗಿದ್ದೀರಿ.

ಶ್ರೀ ಸಿ. ಭೈರೇಗೌಡ : ನೀವು ಸುಮ್ಮನೆ ಇರಿ ಎಂದು ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಾನು ಸುಮ್ಮನೆ ಇರಿ ಎಂದು ಯಾವತ್ತೂ ಹೇಳಿಲ್ಲ. ನೀವು ಯಾವುದೋ ಅಜ್ಜಿಯ ಕಥೆಯನ್ನು ಹೇಳುತ್ತೀರಿ.

ಶ್ರೀ ಸಿ. ಭೈರೇಗೌಡ : ಆಗ ಮಾತ್ರ ಸರಿಯಾಗಿತ್ತು, ಈಗ ಸರಿ ಇಲ್ಲವೇ..

ಶ್ರೀ ವಾಟಾಳ್ ನಾಗರಾಜ್ : ನಿಮ್ಮದು ಎಲ್ಲೂಕ್ಕೂ ವಿತಂಡವಾದ, ಇವರ ಕೃಷಿ ಇಲಾಖೆ ಎನ್ನುವುದನ್ನು ಬಿಟ್ಟು ವಿತಂಡ ಇಲಾಖೆ ಎಂದು ಮಾಡಿ, ಮಾತು ಎತ್ತಿದರೆ ವಿತಂಡವಾದವನ್ನು ಮಾಡುತ್ತಾರೆ. ಇಲ್ಲಿ ವಿರೋಧಪಕ್ಷದವರಿಗೆ ತೀವ್ರವಾದ ಹಕ್ಕುಚ್ಯುತಿಯಾಗಿದೆ. ಆದುದರಿಂದ ಇದನ್ನು ನೇರವಾಗಿ ಹಕ್ಕುಚ್ಯುತಿ ಸಮಿತಿಗೆ...

ಅಧ್ಯಕ್ಷರು : ಅಂದರೆ ನೀವು ಹೇಳುವಂಥಾದ್ದು, ಈ ಸದನದಲ್ಲಿ ಜನ ಪ್ರತಿನಿಧಿಯಾಗಿ ಕಾರ್ಯವನ್ನು ನಿರ್ವಹಿಸುವಂತಹ ಸಮಯದಲ್ಲಿ ಜನರಿಗೆ ಪರಿಚಯ ಮಾಡುವುದರಲ್ಲಿ ಅವರು ವಿಫಲರಾಗಿ, ನಿಮ್ಮ ಹಕ್ಕಿಗೆ

ಶ್ರೀ ವಾಟಾಳ್ ನಾಗರಾಜ್ : ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಆದುದರಿಂದ ಹಕ್ಕುಚ್ಚಯುತಿಯನ್ನು ಮಂಡಿಸಿ ಈ ನಿರ್ಣಯವನ್ನೂ ಕೊಡುತ್ತಿದ್ದೇನೆ. ದಿನಾಂಕ : 18-3-97ರಂದು ಕರ್ನಾಟಕ ವಿಧಾನಸಭೆಯಲ್ಲಿ..

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಅವತ್ತು ಹಣಕಾಸಿನ ಸಚಿವರು ಕುರ್ಚಿಯಲ್ಲಿ ಕುಳಿತು.. ಬಜೆಟ್...

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ, ನಾನು ಏಕೆ ಮಧ್ಯೆ ಪ್ರವೇಶ ಮಾಡಿದೆನೆಂದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಭಾಷಣವನ್ನು ಪ್ರಾರಂಭ ಮಾಡಿ ಮಧ್ಯದಲ್ಲಿ ಎಲ್ಲೋ ವಿಷಯ ಬೇರೆ ಕಡೆಗೆ ಹೋಗುತ್ತಿತ್ತು. ಅದಕ್ಕಾಗಿ ಈ ವಿಷಯಕ್ಕೆ ವಾಪಸ್ಸು ತರಬೇಕೆನ್ನುವ ಉದ್ದೇಶದಿಂದ ನಾನು ನೆನಪು ಮಾಡಿಕೊಟ್ಟೆ, ಇನ್ನಾವ ಬೇರೆ ಉದ್ದೇಶದಿಂದಲೂ ಅಲ್ಲ. ಅವರ ಅಭಿಪ್ರಾಯವೇನೆಂದರೆ ಅವರವರಿಗೆ ಅವರದೇ ಆದಂತಹ ಕರ್ತವ್ಯಗಳು ಇರುತ್ತವೆ. ಮಂತ್ರಿಗಳಿಗೆ, ವಿರೋಧಪಕ್ಷದವರಿಗೆ, ಅವರದೇ ಆದಂತಹ ಕರ್ತವ್ಯಗಳು ಇರುತ್ತವೆ. ಇವರು ಕರ್ತವ್ಯ ನಿರ್ವಹಣೆ ಮಾಡುವಾಗ ಜನರಿಗೆ ಪರಿಚಯ ಮಾಡುವಂತಹ ಸರ್ಕಾರದ ಸಾಮೂಹಿಕ ಮಾಧ್ಯಮಗಳು ಯಾವುದು ಇದೆ, ಅವರು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸದೇ ಹೋದರೆ ಅದು ನಮ್ಮ ಹಕ್ಕಿಗೆ ಚ್ಯುತಿ ತಂದಹಾಗೆ ಆಗುತ್ತದೆ. ಅವರು ಜನರಿಗೆ ಪರಿಚಯ ಮಾಡುವುದರಲ್ಲಿ ಫೇಲಾಗಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ.

8.00 ಪಿ. ಎಂ

ಶ್ರೀ ವಾಟಾಳ್ ನಾಗರಾಜ್ : ತಾವು ಏತಕ್ಕೆ ಕೇಳುತ್ತಿದ್ದೀರೆಂದು ನನಗೆ ಗೊತ್ತು, ನಾನು ಮತ್ತೆ ಹಿಂದಕ್ಕೆ ಬರುತ್ತಿದ್ದೆ, ಅಷ್ಟೊತ್ತಿಗೆ ಇವರು ನಕ್ಕರು.

ಅಧ್ಯಕ್ಷರು : ನನ್ನನ್ನು ನಿಮ್ಮನ್ನು ನೋಡಿ ನಗದೆ ಇರುವವರು ಯಾರಿದ್ದಾರೆ, ಅದಕ್ಕೆ ಏತಕ್ಕೆ ಲೆಕ್ಕ ಇಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತು, ಆದ್ದರಿಂದ ನಮಗೆ 18-3-97ರಂದು ಕರ್ನಾಟಕ ವಿಧಾನಸಭೆಯಲ್ಲಿ ರಾಜ್ಯದ ಹಣಕಾಸು ಸಚಿವ ಶ್ರೀ ಸಿದ್ದರಾಮಯ್ಯನವರು 1997-98ನೇ ಸಾಲಿನ ರಾಜ್ಯದ ಆಯವ್ಯಯವನ್ನು ಮಂಡಿಸುವಾಗ..

ಶ್ರೀ ಎನ್. ರಾಜಣ್ಣ : ಮಾನ್ಯ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿ ನೂರು ನಿಮಿಷಗಳ ಕಾಲ ನಿಂತು ಪುಸ್ತಕದಲ್ಲಿರತಕ್ಕಂಥ 216 ಪುಟಗಳನ್ನು ಓದುತ್ತಿದ್ದರು, ದೂರದರ್ಶನದವರು ಅವರು ಓದುತ್ತಿರುವುದನ್ನು ಸಂಪೂರ್ಣವಾಗಿ ತೆಗೆದುಕೊಳ್ಳುತ್ತಿದ್ದರು. ಆದರೆ ಇವರೂ ಕೂಡ ಕುರ್ಚಿಯಲ್ಲಿ ಕುಳಿತಿದ್ದರೆ ಇವರನ್ನೂ ತೆಗೆದುಕೊಳ್ಳುತ್ತಿದ್ದರು, ಇವರು ಕುರ್ಚಿಯನ್ನು ಬಿಟ್ಟು ಈ ಕಡೆಯಿಂದ ಆ ಕಡೆಯಿಂದ ಈ ಕಡೆಗೆ ಹೋದರೆ ಅವರು ಹೇಗೆ ಸರ್ ತೆಗೆದುಕೊಳ್ಳುತ್ತಾರೆ?

ಅಧ್ಯಕ್ಷರು : ನೋಡಿ ವಾಟಾಳ್ ನಾಗರಾಜ್‌ರವರೇ, ನಾನು ಈ ವಿಚಾರದಲ್ಲಿ ನಿಮಗೆ ಏನೂ ಸಹಾಯ ಮಾಡುವುದಕ್ಕಾಗುವುದಿಲ್ಲ, ಬೇರೆ ಏನೇ ಇದ್ದರೂ ಸಹಾಯ ಮಾಡುತ್ತಿದ್ದೆ ಈ ವಿಚಾರದಲ್ಲಿ ನಾನು ಅಸಹಾಯಕನಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಒಳ್ಳೆಯ ಸಲಹೆ, ಅವತ್ತು ನಾನು ತಪ್ಪು ಮಾಡಿ, ನಾನು ಸಿದ್ಧರಾಮಯ್ಯನವರ ಹೆಗಲ ಮೇಲೆ ಕುಳಿತುಕೊಳ್ಳಬೇಕಾಗಿತ್ತು ಏಕೆಂದರೆ, ಕ್ಯಾಮೆರಾ ಆ ಕೆಡೆ ಇತ್ತು ನೋಡಿ, ನಾನು ಅವರ ಹೆಗಲ ಮೇಲೆ ಕುಳಿತಿದ್ದರೆ ಒಳ್ಳೆಯದಾಗುತ್ತಿತ್ತು, ಅದು ನಿಜ ಆಗಬೇಕಾಗಿತ್ತು. ದಿನಾಂಕ 18-3-97ರಂದು ಕರ್ನಾಟಕ ವಿಧಾನಸಭೆಯಲ್ಲಿ ರಾಜ್ಯ ಹಣಕಾಸು ಸಚಿವರು ಹಾಗೂ ಉಪಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು 1997-98ನೇ ಸಾಲಿನ ರಾಜ್ಯ ಆಯವ್ಯಯ ಪತ್ರವನ್ನು ಮಂಡಿಸುವಾಗ ವಿರೋಧಪಕ್ಷದವರು ಪ್ರತಿಭಟನೆಯನ್ನು ವ್ಯಕ್ತಪಡಿಸುವಾಗ ದೂರದರ್ಶನ ಕೇಂದ್ರದವರು ರಾಜ್ಯ ಆಯವ್ಯಯಪತ್ರವನ್ನು ನೇರ ಪ್ರಸಾರ ಮಾಡುವ ಸಂದರ್ಭದಲ್ಲಿ ವಿರೋಧಪಕ್ಷದವರನ್ನು ಕಡೆಗಾಣಿಸಿರುವುದರಿಂದ ವಿರೋಧಪಕ್ಷದ ಸದಸ್ಯರುಗಳ ಹಕ್ಕಿಗೆ ಚ್ಯುತಿ ಬಂದಿರುತ್ತದೆ. ಆದುದರಿಂದ ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿ ನಿಯಮವಳಿಗಳ 191ರ ರೀತ್ಯಾ ದೂರದರ್ಶನ ಕೇಂದ್ರದ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ತಮ್ಮಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ಸರ್ ನಾನು ನಿರ್ಣಯವನ್ನು ಓದಿದ್ದೇನೆ ತಮಗೆ ಅನುಮತಿಗೆ ಇದನ್ನು ಕಳುಹಿಸಿ

+ ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಮುಖ್ಯವಾಗಿರುವ ಪ್ರಶ್ನೆ ಹಕ್ಕುಚ್ಯುತಿ ಹೇಗಾಗುತ್ತದೆ ಎಂದರೆ, ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ ವಿರೋಧಪಕ್ಷ ಇವೆರಡೂ ಕೂಡ ಜನತೆಯಿಂದ ಆಯ್ಕೆಯಾದ ಪಕ್ಷಗಳು. ಬಹುಮತ ಯಾರಿಗೆ ಹೆಚ್ಚಿಗೆ ಬರುತ್ತದೆಯೋ ಅವರು ಆಡಳಿತವನ್ನು ನಡೆಸುತ್ತಾರೆ. ಕಡಿಮೆ ಬಹುಮತ ಬಂದವರು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುತ್ತಾರೆ, ಅದು ಪ್ರಜಾಪ್ರಭುತ್ವದ ಒಂದು ಮೂಲಭೂತವಾದ ನಿಯಮ. ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಪ್ರಾಮುಖ್ಯತೆ ಇದೆಯೊ ಅಷ್ಟೆ ಪ್ರಾಮುಖ್ಯತೆ ವಿರೋಧಪಕ್ಷಗಳಿಗೆ ಇದೆ. ಅದೇ ರೀತಿ ಪ್ರಸಾರ ಮಾಧ್ಯಮಗಳಿಗೂ ಕೂಡ ಪ್ರಜಾಪ್ರಭುತ್ವದಲ್ಲಿ ಅಷ್ಟೆ ಪ್ರಾಮುಖ್ಯತೆ ಇದೆ, ಅಷ್ಟೇ ಜವಾಬ್ದಾರಿಯು ಕೂಡ ಇದೆ. ಪ್ರಜಾಪ್ರಭುತ್ವದಲ್ಲಿ ಈ ಮೂರು ಅಂಗಗಳು ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕಾಗಿರುವುದು ಕೂಡ ಪ್ರಜಾಪ್ರಭುತ್ವ ಒಂದು ನಿಯಮ. ಆಡಳಿತ ಪಕ್ಷದವರು, ವಿರೋಧಪಕ್ಷದವರು, ಪ್ರಸಾರ ಮಾಧ್ಯಮ, ನಾವು ಮೂವರು ಕೂಡ ನಮ್ಮನ್ನು ಆಯ್ಕೆ ಮಾಡಿದ ಜನರಿಗೆ ಜವಾಬ್ದಾರರು. ಮತ್ತು ಪ್ರಸಾರ ಮಾಧ್ಯಮಗಳೂ ಕೂಡ ಜನತೆಯ

ಬಗ್ಗೆ ಕಾಳಜಿ ಹೊಂದಿರಬೇಕಾಗುತ್ತದೆ, ಸಮಾಜದ ಬಗ್ಗೆ ಕಾಳಜಿ ಇರಬೇಕಾಗುತ್ತದೆ. ಇಂಥ ಒಂದು ಪ್ರಜಾಪ್ರಭುತ್ವದ ವ್ಯವಸ್ಥೆ ಆಡಳಿತ ಪಕ್ಷಕ್ಕೆ, ವಿರೋಧಪಕ್ಷಗಳಿಗೆ ಸರಿಯಾದ ರೀತಿಯಲ್ಲಿ, ಅವರದೆ ಆದಂಥ ಸಂವಿಧಾನದತ್ತವಾಗಿ ಹಕ್ಕುಗಳು ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಕೂಡ ಇವೆ. ಈ ಪ್ರಜಾಪ್ರಭುತ್ವದಲ್ಲಿ ಸಂವಿಧಾನದತ್ತವಾಗಿ ಬಂದಿರುವ ಹಕ್ಕುಗಳು ಯಾವುವು? ಬಹುಮತ ಪಡೆದಂಥ ಪಕ್ಷ ಆಡಳಿತ ನಡೆಸತಕ್ಕಂಥದ್ದು, ಆಡಳಿತ ನಡೆಸುವುದಕ್ಕೆ ಸರ್ಕಾರವನ್ನು ರಚನೆ ಮಾಡಿದರೆ ಅದು ಪಕ್ಷದ ಸರ್ಕಾರವಾಗುವುದಿಲ್ಲ ಅದು ಆ ರಾಜ್ಯದ ಸರ್ಕಾರ, ದೇಶದ ಸರ್ಕಾರವಾಗುತ್ತದೆ, ಇಡೀ ಜನತೆಯ ಸರ್ಕಾರವಾಗುತ್ತದೆ. ಹಾಗೆ ವಿರೋಧಪಕ್ಷಗಳೂ ಕೂಡ ಜನತೆಯಿಂದ ಮತ ಪಡೆದು ಆಯ್ಕೆಯಾಗಿ ಬಂದಿರತಕ್ಕಂಥವರು, ಪ್ರಜಾಪ್ರಭುತ್ವದಲ್ಲಿ ಸಂವಿಧಾನದತ್ತವಾಗಿ ಬಂದಿರತಕ್ಕಂಥ ಆ ಹಕ್ಕುಗಳು, ಅದರ ಪ್ರಕಾರ, ಅವರುಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುವ ಸಂದರ್ಭದಲ್ಲಿ ಜನತೆಯ ಆಶೋತ್ತರಗಳನ್ನು ಜನತೆಯ ಸಮಸ್ಯೆಗಳನ್ನು ಅವರು ಇಲ್ಲಿ ಪ್ರತಿನಿಧಿಸಬೇಕಾಗುತ್ತದೆ. ಏಕೆಂದರೆ, ನಾನು ಪ್ರಜಾಪ್ರಭುತ್ವದಲ್ಲಿ ಅದರ ಮೂಲ ಉದ್ದೇಶಕ್ಕೆ ಹೋಗುವುದಿಲ್ಲ. ಜನತೆಯಿಂದ ಆಯ್ಕೆಯಾಗಿ ಬಂದಂಥ ಯಾರೇ ಸದಸ್ಯರು ವಿರೋಧಪಕ್ಷದಲ್ಲಿರಬಹುದು ಅಥವಾ ಆಡಳಿತ ಪಕ್ಷದಲ್ಲಿರಬಹುದು, ಅವರನ್ನು ಆಯ್ಕೆ ಮಾಡಿ ಕಳುಹಿಸಿರತಕ್ಕಂಥ ಜನತೆಯ ಆಶೋತ್ತರಗಳನ್ನು ಮತ್ತು ಅನಿಸಿಕೆಗಳನ್ನು ಇಲ್ಲಿ ಪ್ರತಿಪಾದನೆ ಮಾಡುವುದಕ್ಕೆ, ವ್ಯಕ್ತಪಡಿಸುವುದಕ್ಕೆ ಇದು ಮುಕ್ತವಾದ ಒಂದು ಸ್ಥಾನ. ಪ್ರಜಾಪ್ರಭುತ್ವದಲ್ಲಿ ಅತ್ಯುನ್ನತವಾದ, ಗೌರವಾನ್ವಿತವಾಗಿರುವ ಈ ಸದನದಲ್ಲಿ ಪ್ರಜಾಪ್ರಭುತ್ವ ರೀತ್ಯ ಆಯ್ಕೆಯಾಗಿ ಬಂದಿರುವ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳುವಾಗ, ಅವರನ್ನು ಆಯ್ಕೆ ಮಾಡಿ ಕಳುಹಿಸಿದ ಜನತೆಗೆ, ನಾವು ಆಯ್ಕೆ ಮಾಡಿ ಕಳುಹಿಸಿದ ಪ್ರತಿಗಳು ಅವರು ಏನು ಮಾತನಾಡುತ್ತಿದ್ದಾರೆ, ಜನತೆಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಯಾವ ರೀತಿಯಾದ ಅಭಿಪ್ರಾಯವನ್ನು ಅವರು ಶಾಸನ ಸಭೆಯಲ್ಲಿ ಮಂಡಿಸುತ್ತಿದ್ದಾರೆ, ಯಾವ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ ಎನ್ನುವ ವಿಷಯವನ್ನು ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ ಜನತೆಗೆ ತಿಳಿಸಬೇಕಾದ ಕರ್ತವ್ಯ ಇದೆ. ಆ ಕರ್ತವ್ಯ ಮಾಡಬೇಕಾದ್ದು ಪ್ರಸಾರ ಮಾಧ್ಯಮಗಳು. ಸನ್ಮಾನ್ಯ ಅಧ್ಯಕ್ಷರೇ, ಎರಡನೆ ಅಂಶ ಏನೆಂದರೆ, ನಾವು ಒಂದು ಚುನಾವಣಾ ಆಯೋಗದಿಂದ ಅಂಗೀಕರಿಸಲ್ಪಟ್ಟ ಒಂದು ರಾಷ್ಟ್ರೀಯ ಪಕ್ಷದವರು. ನಾನು ಮಾರ್ಕ್ಸ್‌ವಾದಿ ಪಕ್ಷದ ಪ್ರತಿನಿಧಿಯಾಗಿ ನನ್ನ ಪಕ್ಷದ ಚಿಹ್ನೆಯಲ್ಲಿ ಆಯ್ಕೆಯಾಗಿ ಇಲ್ಲಿ ಬಂದಿದ್ದೇನೇ. ಅದು ಚುನಾವಣಾ ಆಯೋಗದಿಂದ ಮನ್ನಣೆ ಪಡೆದಿರುವ ರಾಷ್ಟ್ರೀಯ ಪಕ್ಷ. ನಾವು ಎಷ್ಟು ಜನ ಆಯ್ಕೆಯಾಗಿ ಬಂದಿದ್ದೇವೆಂದು ಪ್ರಶ್ನೆ ಬೇರೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಷಯಗಳ ಬಗ್ಗೆ ಪ್ರತಿಯೊಂದು ರಾಷ್ಟ್ರೀಯ

ಪಕ್ಷವು ತನ್ನದೇ ಆದಂಥ ಅಭಿಪ್ರಾಯವನ್ನು ಹೊಂದಿರುತ್ತದೆ. ತಮ್ಮ ಅಭಿಪ್ರಾಯವನ್ನು ಹೊಂದಿರುವ ಆ ರಾಷ್ಟ್ರೀಯ ಪಕ್ಷಗಳು ರಾಜ್ಯದ ಸಮಸ್ಯೆಗಳ ಬಗ್ಗೆ, ಅದು ಸಾರಾಯಿ ವಿಷಯವಿರಬಹುದು, ಬೆಲೆ ಏರಿಕೆಯ ಬಗ್ಗೆ ಇರಬಹುದು, ಯಾವುದೇ ಇರಬಹುದು, ರಾಜ್ಯಕ್ಕೆ ಸಂಬಂಧಿಸಿದ ಪ್ರತಿಯೊಂದು ವಿಷಯಗಳ ಬಗ್ಗೆ, ಸಮಸ್ಯೆಗಳ ಬಗ್ಗೆ ಒಂದು ರಾಷ್ಟ್ರೀಯ ಪಕ್ಷವಾಗಿ ಅಥವಾ ಪ್ರಾದೇಶಿಕ ಪಕ್ಷಗಳೂ ಕೂಡ ತಮ್ಮದೆ ಆದಂಥ ಅಭಿಪ್ರಾಯವನ್ನು ಹೊಂದಿರುವ ಸಂದರ್ಭದಲ್ಲಿ, ಆ ಅಭಿಪ್ರಾಯಗಳೇನು ಎನ್ನುವುದು ಜನತೆಗೆ ಗೊತ್ತಾಗಬೇಕಾಗುತ್ತದೆ, ಇದು ಪ್ರಜಾಪ್ರಭುತ್ವದ ಮೂಲ ನಿಯಮ. ಇವತ್ತು ಆ ಜನತೆಗೆ ಗೊತ್ತಾಗಬೇಕಾದರೆ ಜನಪ್ರತಿನಿಧಿಗಳು, ಸರ್ಕಾರ, ಶಾಸನ ಸಭೆಯಲ್ಲಿ ಏನು ನಡೆಯುತ್ತದೆ, ಇದೆಲ್ಲವನ್ನೂ ಕೂಡ ಜನತೆಗೆ ತಿಳಿಸತಕ್ಕಂಥ ಅತಿ ಮಹತ್ವವಾದ ಜವಾಬ್ದಾರಿ ಇವತ್ತು ಇರತಕ್ಕಂಥದ್ದು ಸಮೂಹ ಮಾಧ್ಯಮಗಳ ಮೇಲೆ, ಪತ್ರಿಕೆಗಳಾಗಬಹುದು, ದೂರದರ್ಶನವಾಗಬಹುದು, ರೇಡಿಯೋ ಆಗಬಹುದು ಇವೆಲ್ಲವಕ್ಕೂ ಕೂಡ ಈ ಅಭಿಪ್ರಾಯಗಳನ್ನು ಜನತೆಗೆ ತೆಗೆದುಕೊಂಡು ಹೋಗಿ ತಿಳಿಸತಕ್ಕಂಥ ಪವಿತ್ರವಾದ ಒಂದು ಜವಾಬ್ದಾರಿ ಇದೆ. ಏಕೆಂದರೆ, ನಾಳೆ ದಿವಸ ಆ ಜನತೆ ತೀರ್ಮಾನ ಮಾಡಬೇಕಾಗುತ್ತದೆ. ನಾವು ಆಯ್ಕೆ ಮಾಡಿ ಕಳುಹಿಸಿದ ಪಕ್ಷಗಳು ಮತ್ತು ನಾವು ಆಯ್ಕೆ ಮಾಡಿ ಕಳುಹಿಸಿದ ಅಭ್ಯರ್ಥಿಗಳು, ಸದಸ್ಯರುಗಳು ಯಾವ ರೀತಿಯಲ್ಲಿ ನಡೆದು ಕೊಳ್ಳುತ್ತಿದ್ದಾರೆ, ಯಾವ್ಯಾವ ಸಮಸ್ಯೆಗಳ ಬಗ್ಗೆ ಅವರು ಯಾವ ರೀತಿಯಾದ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ ಎನ್ನುವುದು ಅವರಿಗೆ ಗೊತ್ತಾಗದೆ ಹೋದರೆ ಪ್ರಜಾಪ್ರಭುತ್ವದ ನಿಯಮಗಳ ಪ್ರಕಾರ ನಾಳೆ ದಿವಸ ಚುನಾವಣೆ ನಡೆದಂಥ ಸಂದರ್ಭದಲ್ಲಿ ಆ ಜನತೆ ಯಾವ ಅಂಶ ಆಧಾರದ ಮೇಲೆ ತೀರ್ಪನ್ನು ಕೊಡಬೇಕು, ನಮ್ಮ ನಡವಳಿಕೆ, ನಮ್ಮ ಪಕ್ಷಗಳು ತೆಗೆದುಕೊಂಡಂಥ ನಿಲುವುಗಳು, ನೀತಿ, ಧೋರಣೆಗಳು, ಅವರು ಸಮಸ್ಯೆಗಳ ಬಗ್ಗೆ ವ್ಯಕ್ತಪಡಿಸುವ ಅಭಿಪ್ರಾಯಗಳು, ಪ್ರಜಾಪ್ರಭುತ್ವದಲ್ಲಿ ಆ ಅಭಿಪ್ರಾಯಗಳ ಆಧಾರದ ಮೇಲೆ ಜನತೆ ತೀರ್ಪು ತೆಗೆದು ಕೊಳ್ಳಬೇಕಾಗುತ್ತದೆಯೇ ಹೊರತು ಬೇರೆ ಯಾವುದೇ ಆಧಾರದ ಮೇಲೆ ತೀರ್ಪು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ದುಷ್ಟಿಯಲ್ಲಿ ಇವತ್ತು ರಾಷ್ಟ್ರೀಯ ಪಕ್ಷಗಳಾಗಬಹುದು, ಪ್ರದೇಶಿಕ ಪಕ್ಷಗಳಾಗಿರಬಹುದು ಅಥವಾ ಜನತೆಯಿಂದ ಆಯಕ್ಕೆಯಾಗಿ ಬಂದಿರುವ ಒಬ್ಬ ಸದಸ್ಯರ ಅಭಿಪ್ರಾಯವನ್ನು ಜನತೆಗೆ ತಿಳಿಸತಕ್ಕಂಥ ಪ್ರಮುಖವಾದ ಕರ್ತವ್ಯ ಅವರದಿದೆ ಮತ್ತು ಆ ಅಭಿಪ್ರಾಯವನ್ನು ಆಯ್ಕೆಯಾದ ಪ್ರತಿನಿಧಿಗಳು ಇಲ್ಲಿ ವ್ಯಕ್ತಪಡಿಸುವುದು ಅದು ಅವರ ಹಕ್ಕು. ಆದುದರಿಂದ ನಮ್ಮ ಹಕ್ಕುನ್ನು ನಾವು ಇಲ್ಲಿ ಚುನಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮನ್ನು ಆಯ್ಕೆ ಮಾಡಿದ ಜನತೆಗೆ ಅದನ್ನು ತಿಳಿಸದೆ ಹೋದರೆ ಅದು

ನಮ್ಮ ಹಕ್ಕುಚ್ಯುತಿಯಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ಅಭಿಪ್ರಾಯಗಳನ್ನು ಜನತೆಗೆ ತಿಳಿಸತಕ್ಕಂಥ ಕರ್ತವ್ಯವನ್ನು ಪ್ರಜಾಪ್ರಭುತ್ವದಲ್ಲಿ ಹೊಂದಿರುವ ಸಮೂಹ ಮಾಧ್ಯಮಗಳು ಅವನ್ನು ಜನತೆಗೆ ತಿಳಿಸದೆ ಹೊದರೆ ಅವರ ಕರ್ತವ್ಯಲೋಪಕೂಡ ಆಗುತ್ತದೆ. ಆದುದರಿಂದ ಇವತ್ತು ಈ ದೃಷ್ಟಿಯಲ್ಲಿ ಪ್ರತಿಪಕ್ಷಗಳ ಸದಸ್ಯರುಗಳ ಹಕ್ಕೇನಿದೆ, ಆ ಹಕ್ಕನ್ನು ಇಲ್ಲಿ ಪ್ರತಿಪಾದನೆ ಮಾಡತಕ್ಕಂಥ ಸಂದರ್ಭದಲ್ಲಿ ಅವರು ಯಾವ ರೀತಿಯಾಗಿ ತಮ್ಮ ಹಕ್ಕನ್ನು ಚಲಾವಣೆ ಮಾಡುತ್ತಿದ್ದಾರೆ ಎನ್ನುವುದನ್ನು ಜನತೆಗೆ ತಿಳಿಸತಕ್ಕಂಥದ್ದರಲ್ಲಿ ವಿಫಲರಾಗಿರುವ ಕಾರಣದಿಂದ ನಮ್ಮ ಹಕ್ಕುಚ್ಚುತ್ತಿಯಾಗಿದೆ, ಇದು ನನ್ನ ಅಭಿಪ್ರಾಯ. ಈ ರೀತಿಯಲ್ಲಿ ನಮ್ಮ ಹಕ್ಕುಚ್ಯುತಿ ಆಗಿದೆ, ಆದ್ದರಿಂದ ಈ ನಿರ್ಣಯವನ್ನು ತಾವು ಅಂಗೀಕಾರ ಮಾಡಬೇಕೆಂದು ಹೇಳಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರು ಇಡೀ ವಿರೋಧ ಪಕ್ಷದವರನ್ನು ಸಂಘಟನೆ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದು ಮಾನ್ಯ ವಾಟಾಳ್ ನಾಗರಾಜ್‌ರವರ ಒಬ್ಬರ ಪ್ರಶ್ನೆ ಅಲ್ಲ. ಅವರು ಮಂದಾಳತ್ವವನ್ನು ವಹಿಸಿರಬಹುದು. ಅವರು ತಂದಿರತಕ್ಕಂಥ ನಿರ್ಣಯಕ್ಕೆ ನಾವು ಬೆಂಬಲವನ್ನು ಕೊಡುತ್ತೇವೆ. ಎಕ್ಸಿಕ್ಯೂಟೀವ್, ಲೆಜಿಸ್ಲೇಚರ್, ಜ್ಯುಡಿಷಿಯರಿ ಮತ್ತು ಪ್ರೆಸ್ ಇವು ಪ್ರಜಾಪ್ರಭುತ್ವದ 4 ಆಧಾರ ಸ್ಥಂಭಗಳು. ಇಲ್ಲಿ ಪ್ರಶ್ನೆ ಏನೆಂದರೆ, ಇದರಲ್ಲಿ ಒಬ್ಬರು ಎಡವಿದರೆ ಇನ್ನೊಬ್ಬರು, ಇನ್ನೊಬ್ಬರು ಎಡವಿದರೆ ಮತ್ತೊಬ್ಬರು ಎಂದು ಹೇಳಿ ಈ ಒಂದು check and balance ಇರತಕ್ಕಂಥ ರೀತಿಯಲ್ಲಿ ಇವು 4 ಸಂಸ್ಥೆಗಳು ಇವೆ. ಆದರೆ ಈ 4 ಸಂಸ್ಥೆಗಳೂ ಕೂಡ ಜ್ಯುಡಿಷಿಯಸ್ಲಿ ಕೆಲಸ ಮಾಡಬೇಕಾಗುತ್ತದೆ. ಅವರವರ ಪಾತ್ರವನ್ನು ಅವರುಗಳು ನ್ಯಾಯವಾಗಿ ವಹಿಸಿದಾಗ ಮಾತ್ರ ಈ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಅವರವರ ಪಾತ್ರ ಅವರು ತಿಳಿದ ಹಾಗೆ ಅಥವಾ ಪಾಷಿಯಾಲಿಟಿ ಧೋರಣೆಯಿಂದ ನಡೆದುಕೊಂಡರೆ ಖಂಡಿತವಾಗಿ ಈ ಪ್ರಜಾಪ್ರಭುತ್ವ ಯಾಶಸ್ವಿಯಾಗುವುದಿಲ್ಲ ಎನ್ನತಕ್ಕಂಥದ್ದನ್ನು ನಾನು ಇವತ್ತಿನ ದಿವಸ ಸ್ಪಷ್ಟಪಡಿಸುತ್ತೇನೆ. ಇವತ್ತು ಏನಾಗುತ್ತದೆಯೆಂದರೆ, ಅನೇಕ ಸಲ ಆಡಳಿತ ಪಕ್ಷದವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ. ಅವರು ಪ್ರಸ್ತಾಪ ಮಾಡಿದಾಗ ಅದಕ್ಕೆ ಪೂರಕವಾಗಿ ಅಥವಾ ನಮ್ಮ ವಿಚಾರಗಳನ್ನು ಯಾವ ರೀತಿಯಾಗಿ ಹೇಳಬೇಕೋ ಅದನ್ನು ಹೇಳುತ್ತೇವೆ ಅಥವಾ ಪ್ರತಿಭಟಿಸುತ್ತೇವೆ ಅಥವಾ ವಾದ ಮಾಡುತ್ತೇವೆ, ಅವೆರಡಕ್ಕೂ ಕೂಡ ಅಷ್ಟೇ ಪ್ರಚಾರ ಕೊಟ್ಟಾಗ ಮಾತ್ರ ಪ್ರಜಾಪ್ರಭುತ್ವದಲ್ಲಿ ಯಾರು ನಮ್ಮನ್ನು ಇಲ್ಲಿಗೆ ಆಯ್ಕೆ ಮಾಡಿ ಕಳುಹಿಸುತ್ತಾರೋ ಅವರಿಗೆ ಅರ್ಥವಾಗುತ್ತದೆ. ಆ ವಿರೋಧ ಪಕ್ಷದವರ

ಪಾತ್ರ ಈ ಒಂದು ಇಷ್ಯೂನಲ್ಲಿ ಇಂತಹ ರೀತಿಯಲ್ಲಿ ಅವರು ಪ್ರಾತ್ರವಹಿಸಿದ್ದಾರೆ, ಆಡಳಿತ ಪಕ್ಷದವರು ಈ ಕಾರಣಕ್ಕಾಗಿ ಈ ನಿಲುವನ್ನು ತಾಳಿದ್ದಾರೆ ಎನ್ನುತಕ್ಕಂಥದ್ದು ಜನರಿಗೆ ಗೊತ್ತಾಗುತ್ತದೆ. ಅದನ್ನು ಬಿಟ್ಟು ನಾವು ಕೇವಲ ಒಂದು ವರ್ಗಕ್ಕೆ ಅಥವಾ ಸರ್ಕಾರಕ್ಕೆ ಮಾತ್ರ ಪ್ರೋತ್ಸಾಹ ನೀಡುತ್ತೇವೆ, ಉಳಿದಂತೆ ಶಾಸಕರಿಗಾಗಲಿ, ಅಥವಾ ನಿರೋಧ ಪಕ್ಷದಲ್ಲಿ ಆರಿಸಿ ಬಂದಂಥವರಿಗೆ ಅವರ ಅಭಿಪ್ರಾಯಕ್ಕೆ ಮನ್ನಣೆ ಇಲ್ಲ ಅಂದರೆ ಇದು ಪ್ರಜಾಪ್ರಭುತ್ವದ ನೀತಿ ಅಲ್ಲ. ಮತ್ತು ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರ ಒಪೀನಿಯನ್‌ಗೆ ತಾವು ಅಂದರೆ ಮೂಡಿಯಾದವರು ಮನ್ನಣೆ ಕೊಟ್ಟಹಾಗೆ ಆಗುವುದಿಲ್ಲ. ಹಿಂದೆ ರಾಜ್ಯಪಾಲರ ಭಾಷಣ ಇಲ್ಲಿ ನಡೆದಾಗ ಮಾನ್ಯ ರಾಜ್ಯಪಾಲರು ಭಾಷಣ ಮಾಡುತ್ತಿದದ್ದಾಗ ಯಾವಾಗಲೂ ಒಂದೇ ಕಡೆ ದೂರದರ್ಶನದವರು ತೋರಿಸುತ್ತಿದ್ದರು. ಇದನ್ನು ಆಗ ನಾವೆಲ್ಲರೂ ಕೂಡ ಪ್ರತಿಭಟಿಸಿದ್ದೇವೆ. ಅದೇ ರೀತಿಯಲ್ಲಿ ಬಜೆಟ್‌ನಲ್ಲೂ ಕೂಡ ಮಾನ್ಯ ಸಿದ್ದರಾಮಯ್ಯನವರು ಪುಸ್ತಕ ಹಿಡಿದುಕೊಂಡು ಓದುತ್ತಿರುವುದನ್ನು ಬಿಟ್ಟರೆ ಬೇರೆಯಾರನ್ನೂ ಸಹ ದೂರದರ್ಶನದಲ್ಲಿ ತೋರಿಸಲಿಲ್ಲ. ಅಂದರೆ ಇತರೆ ವಿರೋಧಪಕ್ಷದವರನ್ನು ತೋರಿಸಲೇ ಬೇಕೆಂದು ಏನೆಂದರೆ, ಎಲ್ಲಾ ಪಕ್ಷದವರನ್ನು ಕೂಡ ಸರಿಸಮಾನವಾಗಿ ಮೂಡಿಯಾದವರು ನೋಡುತ್ತಾರೆ ಎನ್ನತಕ್ಕಂಥ ಅಭಿಪ್ರಾಯ ಭಾವನೆ ಎಲ್ಲರಲ್ಲೂ ಮೂಡುವಂತಾಗಬೇಕು. ಆಡಳಿತ ಪಕ್ಷದವರ ಪ್ರಚಾರ ದೃಷ್ಟಿಯಿಂದ ಅವರಿಗೆ ಮೀಡಿಯಾದವರು ಎರಡು ನಿಮಿಷ ಕೊಡಬಹುದು....

ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಬಜೆಟ್ ಭಾಷಣದಲ್ಲಿ ಶ್ರೀ ಸಿದ್ದರಾಮಯ್ಯ ಅವರನ್ನೆ ತೋರಿಸಿದ್ದರು. ಅದು ಅವರದು ಒಂದು ಸ್ವಾತಂತ್ರ್ಯ. ಅದು ಅವರದು ಒಂದು ಪ್ರಿವಿಲೆಜ್. ಆದ್ದರಿಂದ ಅವರ ಹಕ್ಕನ್ನು ನಾವು ಹೇಗೆ ಮಾತನಾಡಲಿಕ್ಕೆ ಆಗುತ್ತದೆ? ಈ ಪ್ರಿವಿಲೇಜನ್ನು ಕೆಲವು ಪ್ರತ್ರಿಕೆಯವರು ಮಾಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಒಂದು ಪತ್ರಿಕೆ ಇದೆ. ನಾವು ಎಲ್ಲಾ ಪ್ಲಾಟ್‌ಫಾರಂನಲ್ಲಿ ಇರುತ್ತೇವೆ. ನಾನು ಮಧ್ಯದಲ್ಲಿ ನಿಂತಿರುತ್ತೇನೆ. ನನ್ನ ಫೋಟೋವನ್ನು ಅಳಿಸಿಹಾಕಿ ಪಬ್ಲಿಷ್ ಮಾಡುತ್ತಾರೆ.

ಅಧ್ಯಕ್ಷರು : ನಿಮ್ಮ ಜಿಲ್ಲೆಯಲ್ಲಿ ಯಾವ ಯಾವ ಪೇಪರ್ಸ್ ಪಬ್ಲಿಷ್ ಆಗುತ್ತಿವೆ?

ಶ್ರೀ ಎಂ. ವೀರಪ್ಪ ಮೊಯಿಲಿ : ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಉದಯವಾಣಿ ಇದೆ. ನನ್ನ ಫೋಟೋ ಮಧ್ಯದಲ್ಲಿ ಇರುತ್ತದೆ. ಅದನ್ನು ಬಹಳ ಚೆನ್ನಾಗಿ ಅಳಿಸಿ ಹಾಕುತ್ತಾರೆ. very artisticalhy, best graft.. ಮಧ್ಯ ನನ್ನದು ಫೋಟೋ ಇದ್ದರೆ ಅಳಿಸಿ So nicely they pant up as I have not presented there.

ಇದೂ ಸಹ ಒಂದು ಸ್ವಾತಂತ್ರ್ಯ. ಕ್ಷಮಿಸಿ, ನನ್ನ ಮನಸ್ಸಿನಲ್ಲಿ ಒಂದು ರೀತಿ ಗೊಂದಲ ಬಂದುಬಿಟ್ಟಿದೆ. ನೆನ್ನೆ ನಡೆದಂಥ ಪ್ರಕರಣದ ಸಮಯದಲ್ಲಿ ಆ ದಿನ ಬೆಳಿಗ್ಗೆ ನಾನು ಸದನದಲ್ಲಿ ಇರಲಿಲ್ಲ. ಅದು ಒಂದು ಪುಸ್ತಕ ವಿಚಾರ. ಖೋಮೆನಿಯವರು ಇರಾನಿನಲ್ಲಿ 'ಫತ್ವಾ' ವನ್ನು ಹೊರಡಿಸಿ ಸಲ್ಮಾನ ರಶ್ದಿಯವರ 'ಸಟಾನಿಕ್ ವರ್ಸಸ್' ಪುಸ್ತಕವನ್ನು ನಿಷೇಧಿಸಿದರು. ಅದು ಸರ್ಕಾರದ ಸ್ವಾತಂತ್ರ್ಯ. ಖೊಮೇನಿಗೂ ಈ ಸರ್ಕಾರಕ್ಕೂ ನನಗೆ ವ್ಯತ್ಯಾಸವೇ ಕಾಣುತ್ತಿಲ್ಲ. ಅಂತಹ ಕೆಲಸ ಮಾಡುವುದೂ ಕೂಡ ಸರ್ಕಾರದ ಸ್ವಾತಂತ್ರ್ಯ. ನನಗಂತೂ ನಿನ್ನೆಯಿಂದ ಯೋಚನೆ ಪ್ರಾರಂಭವಾಗಿದೆ. ಇವತ್ತು ಯಾವ ಪ್ರಜಾಪ್ರಭುತ್ವ, ಯಾವುದು ಸ್ವಾತಂತ್ರ್ಯ ಎಂಬುದು ಇದು ಯಾವುದೂ ನನಗೆ ಅರ್ಥವಾಗುತ್ತಿಲ್ಲ. ಪ್ರಕಾಶ್‌ರವರೇ. ಒಂದೊಂದು ಸ್ವಾಂತಂತ್ರ್ಯ ಒಬ್ಬೊಬ್ಬರಿಗೆ ವೈಯಕ್ತಿಕವಾದಂಥ ಸ್ವಾರ್ಥದ ಒಂದು ಕಾರಂಜಿಯಿಂದ ಬರತಕ್ಕಂಥ ವಿಷಯ ಹೊರತು, ಅಂಥದ್ದರಲ್ಲಿ ಒಂದು ಈ ಸ್ವಾತಂತ್ರ ಸಮೂಹ ಮಾಧ್ಯಮ ಎಂದು ಹೇಳುವಂಥದ್ದು ಅಷ್ಟೆ. ಈ ಮಾಧ್ಯಮದವರಿಗೆ ಏನು ಮಾಡಬೇಕೆಂದು ತೋರುತ್ತದೋ ಅದನ್ನು ಅವರು ಮಾಡುತ್ತಾರೆ. ಅದೇ ಸ್ವಾತಂತ್ರ್ಯ. ದೂರದರ್ಶನದವರು ಏನು ಮಾಡಬಹುದೆಂದು ಇದ್ದರೋ ಅದೇ ಅವರದು ಸಾತಂತ್ರ್ಯ. ಅದನ್ನು ಪ್ರಶ್ನೆ ಮಾಡುವುದಕ್ಕೆ ನಾವು ಯಾರು?

Mr. Speaker : You have raised a very valid point.

ಯಾವ ತರಹದ ಕಲುಷಿತ ವಾತಾವರಣ ಬಂದು ಬಿಟ್ಟಿದೆ ಎಂದರೆ ಈ ಎಲ್ಲಾ ವಿಚಾರಗಳನ್ನು ನಿಷ್ಪಕ್ಷಪಾತ ಮನೋಭಾವದಿಂದ ನೋಡತಕ್ಕಂಥ ದೃಷ್ಟಿಯನ್ನೆ ನಾವು ಕಳೆದುಕೊಂಡಿದ್ದೇವೆ. ಆ ಪುಸ್ತಕಕ್ಕೆ ಯಾರು ಆಕ್ಷೇಪಣೆ ಮಾಡಿದರೋ, ಅದಕ್ಕೋಸ್ಕರ ನಾನು ಅವರ ಮೇಲೆ ಏನೋ ಹೇಳುವುದಿಲ್ಲ. ಅದು ಅವರ ಅಭಿಪ್ರಾಯ. ಅವರ ಮನಸ್ಸಿಗೆ ಏನು ನೋವು ಉಂಟಾಗಿದೆ ಅದನ್ನು ಅವರು ಹೇಳುತ್ತಾರೆ. ಇನ್ನು ಕೆಲವರು ಅಭಿವ್ಯಕ್ತಿ ಸ್ವತಂತ್ರ್ಯ ಎಂದು ಹೇಳುತ್ತಾರೆ. ಆದರೆ ಈ ವಿಚಾರಗಳನ್ನು ಪ್ರತಿಪಾದನೆ ಮಾಡತಕ್ಕಂಥ ಸಂದರ್ಭದಲ್ಲಿ ನಾವೆಷ್ಟು ಬದ್ಧರಾಗುತ್ತೇವೆ? ಹೇಗೆ ನಮ್ಮಲ್ಲಿರತಕ್ಕಂಥ ಬೇರೆ ಎಲ್ಲಾ ನಿರ್ಬಂಧಗಳನ್ನು ಮರೆತು ಒಕ್ಕೊರಲಿನಿಂದ ಅದನ್ನು ಪ್ರತಿಪಾದನೆ ಮಾಡುತ್ತೇವೆ. ಎನ್ನತಕ್ಕಂಥದ್ದು ಹೊರಗಿನ ಸಮಾಜ ನೋಡುತ್ತಿರುತ್ತದೆ. ಈ ದೇಶದ ಗಡಿ ಅಂಚಿನಲ್ಲಿ ಯಾರಾದರೂ ಪರಕೀಯರು ಬಂದು ಧಾಳಿ ನಡೆಸಿದರೆ ಆವಾಗ ನಾವು ಪಾರ್ಟಿ, ಪಂಗಡ ಏನೂ ಮಾತನಡುವ ಹಾಗೆ ಇಲ್ಲ. ದೇಶಭಕ್ತಿ ದೃಷ್ಟಿಯಿಂದ ನಾವೆಲ್ಲರೂ ಕೂಡ 'ಭಾರತ ಮಾತಾ ಕೀ ಜೈ' ಎಂದು ಹೋಗುತ್ತೇವೆ.. ಅದು ಎಲ್ಲರೂ ಕೂಡ ಮೆಚ್ಚತಕ್ಕಂಥದ್ದೇ ಆಗಿದೆ. ಆದರೆ ಆ ತರಹದ ಭಾವನಾತ್ಮಕವಾದಂಥ ಐಕ್ಯತೆಯನ್ನು ಬಿಟ್ಟು ಉಳಿದ ವಿಚಾರಗಳಿಗೆ

ಹೋಗುವುದನ್ನು ನಾವು ಕಾಣುತ್ತೇವೆ. ಅದು ಸೋಜಿಗದ ಸಂಗತಿ. ಅದು ಮನಸ್ಸಿಗೆ ಬಹಳ ಆತಂಕವನ್ನು ಉಂಟುಮಾಡುತ್ತದೆ. ಇದಕ್ಕೆ ಯಾರು ಕಾರಣರು? ಈ ವಾತಾವರಣ ಎಲ್ಲಿಗೆ ಹೋಗಿ ನಾಳೆಯ ದಿವಸ ತಲುಪಬಹುದು? ನಾವು ಏನಾಗಬಹುದ? ಎಂದು ಇವನ್ನೆಲ್ಲಾ ನೆನೆಸಿಕೊಂಡರೆ ಒಮ್ಮೊಮ್ಮೆ ಬಹಳ ಭಯವಾಗುತ್ತದೆ. ಇದ್ಕಕೆ ಯಾರು ಕಾರಣರು? ಈ ವಾತಾವರಣ ಎಲ್ಲಿಗೆ ಹೋಗಿ ನಾಳೆಯ ದಿವಸ ತಲುಪಬಹುದು? ನಾವು ಏನಾಗಬಹುದು? ಎಂದು ಇವನ್ನೆಲ್ಲಾ ನೆನೆಪಿಸಿಕೊಂಡರೆ ಒಮ್ಮೊಮ್ಮೆ ಬಹಳ ಭಯವಾಗುತ್ತದೆ. ಹಸಿವಿನ ಬಗ್ಗೆ, ದರಿದ್ರ್ಯದ ಬಗ್ಗೆ ನಮಗೆ ಅಯಾಯ ಭಾವನಾತ್ಮಕವಾದಂಥ ಐಕ್ಯತೆ ಬರುವುದಿಲ್ಲ. ನಮ್ಮ ಹಸಿವಿಗೆ ನಮ್ಮ ಅಪಮಾನಕ್ಕೆ ಸಂಬಂಧ ಇಲ್ಲದಿರತಕ್ಕಂಥದ್ದಕ್ಕೆ ಅವುದಗಳ ಬಗ್ಗೆ ನಾವು we become emotional. ದಿವಸಗಳು ಕಳೆದ ಹಾಗೆಲ್ಲಾ ವಾತಾವರಣ ಹಾಗೆ ಬರುತ್ತಿದೆ. ತಾವು ಹೇಳಿದಂತೆ ಒಬ್ಬೊಬ್ಬರ ಆಲೋಚನೆ ವಿಧಾನ ಒಂದೊಂದು ರೀತಿಯಲ್ಲಿ ಇರುತ್ತದೆ. ನಾವು ಯಾರೂ ಆಕ್ಷೇಪಣೆ ಮಾಡುವ ಹಾಗಿಲ್ಲ. ಇದಕ್ಕೆ ಕಾಲವೇ ಉತ್ತರ ಹೇಳಬೇಕಷ್ಟೆ because we have seen so many changes. ಚಿಲಿ ದೇಶದಲ್ಲಿ ಅಲನ್‌ಡೇರವರ ಕೊಲೆಯಾದಾಗ ಇಲ್ಲಿ ನಾವು ಪ್ರೊಟೆಸ್ಟ್ ಮಾಡಿದಂಥ ದಿನಗಳು ನಮಗೆ ನೆನಪಿದೆ. As a functionary of the Youth Congress I organised the protest rally here with the support of the Leftist parties. And where are we going to-da? It is a very painful situation. We have got to face the consequences. I understand the anguish.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅನೇಕ ಚುಳುವಳಿಗಳು ನಮ್ಮ ರಾಜ್ಯದಲ್ಲಿ ನಡೆಯುತ್ತವೆ. ತೀವ್ರವಾದಂಥ ಚಳುವಳಿ ಬಗ್ಗೆ ಕೂಡ ಯಾವ ಪ್ರಚಾರವು ಸಿಗುವುದಿಲ್ಲ. ಅಂದರೆ ಜನರ ಸಮಸ್ಯೆಗಳನ್ನು ಎತ್ತಿಹಿಡಿದು ಅದನ್ನು ಹೈಲೈಟ್ ಮಾಡಿ ಸರ್ಕಾರದ ಮುಂದೆ ಇಡಬೇಕೆಂದು ಹೇಳಿ ಅನೇಕ ಚಳುವಳಿಗಳನ್ನು ಮಾಡುತ್ತೇವೆ. ಇಲ್ಲಿ ಎಲ್ಲಾ ಚಳುವಳಿಗಳನ್ನು ಮಾಡುವಾಗ ಪ್ರಚಾರ ಸಿಗಬೇಕೆಂದು ಹೇಳುತ್ತಿಲ್ಲ. ದೊಡ್ಡ ದೊಡ್ಡ ಚಳುವಳಿಗಳನ್ನು ಮಾಡಿದಾಗ ಅವುಗಳಿಗೆ ಪ್ರಚಾರ ಸಿಗಬೇಕೆಂದು ಹೇಳುತ್ತಿಲ್ಲ. ದೊಡ್ಡ ದೊಡ್ಡ ಚಳುವಳಿಗಳನ್ನು ಮಾಡಿದಾಗ ಅವುಗಳಿಗೆ ಪ್ರಚಾರ ಸಿಗಬೇಕು. ಆದರೆ ಯಾವುದಾದರೂ ಸಣ್ಣಪುಟ್ಟ ಸರ್ಕಾರದ ಕಾರ್ಯಕ್ರಮ ಇದ್ದರೆ ಅದಕ್ಕೆ ಸಾಕಷ್ಟು ಪ್ರಚಾರ ಸಿಗುತ್ತದೆ. ಒಂದು ಸಣ್ಣ ಕಾರ್ಯಕ್ರಮದಲ್ಲಿ 10 ಕುರ್ಚಿ ಇದ್ದರೆ ಅದನ್ನೆ ಪದೇ ಪದೇ ತೋರಿಸುತ್ತಿರುತ್ತಾರೆ ಆದರೆ ಸಾವಿರಾರು ಜನರು ಸೇರಿ ಯಾವುದೋ ಒಂದು ದೊಡ್ಡ ಸಮಸ್ಯೆಯನ್ನು ಸರ್ಕಾರದ ಮುಂದೆ ತಂದಿಟ್ಟು ಅದರ ಸಮಸ್ಯೆ ಬಗೆಹರಿಸಬೇಕೆಂದು ಹೇಳಿ

ಅದಕ್ಕೆ ಪರಿಹಾರ ಕಂಡುಹಿಡಿಯಬೇಕೆಂದು ಚಳುವಳಿ ಮಾಡಿದರೆ ಅಂಥವಕ್ಕೆ ಪ್ರಚಾರ ಸಿಗುವುದಿಲ್ಲ. ಆದರೆ ಇಂಥ ಚಳುವಳಿಗೆ ಸ್ವಲ್ಪವಾದರೂ ಪ್ರಚಾರ ಸಿಗಬೇಕಲ್ಲವೆ? ಏಕೆಂದರೆ ಈ ಪ್ರಜಾಪ್ರಭುತ್ವದಲ್ಲಿ ಆಡಳಿತದಲ್ಲಿರತಕ್ಕಂಥವರು ಮತ್ತು ವಿರೋಧಪಕ್ಷದಲ್ಲಿರತಕ್ಕಂಥವರು ಹೀಗೆ ಇಬ್ಬರೂ ಸಹ ಬೇಕು. ಮೂಡಿಯಾ ಧರ್ಮ ಎಂದರೆ ಅದು ಎಲ್ಲರಿಗೂ ಒಂದೇ ನ್ಯಾಯವನ್ನು ಒದಗಿಸಿ ಕೊಡತಕ್ಕಂಥದ್ದನ್ನು ಮಾಡಬೇಕು. ಅದನ್ನು ನೀವು ವ್ಯತ್ಯಾಸ ಮಾಡಿದರೆ, ಖಂಡಿತವಾಗಿ ನಾವು ಏನು ಹೇಳಬೇಕು? ಅದಕ್ಕೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹಕ್ಕುಚ್ಯುತಿ ತಂದಿದ್ದಾರೆ. ಅದಕ್ಕೆ ದಯವಿಟ್ಟು ತಾವು ಪರಿಶೀಲಿಸಿ ಅದನ್ನು ಒಪ್ಪಿಸಿ ಬಿಟ್ಟರೆ ಮುಂದಿನ ಕ್ರಮ ಜರುಗುತ್ತದೆ. ಅದಕ್ಕಾಗಿ ಶ್ರೀ ವಾಟಾಳ್ ನಾಗರಾಜ್‌ರವರು ತಂದಿರುವ ಹಕ್ಕುಚ್ಯುತಿ ನಿರ್ಣಯಕ್ಕೆ ನಾನು ಬೆಂಬಲಿಸುತ್ತೇನೆ.

+ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಬಜೆಟ್ ಮಂಡನೆಯ ಸಂದರ್ಭದಲ್ಲಿ ನಮ್ಮದೇ ಆದಂತಹ ರೀತಿಯಲ್ಲಿ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದೆವು ತಾವು ಇಷ್ಟೊಂದು ಮುತುವರ್ಜಿಯನ್ನು ವಹಿಸಿ ಈ ದೂರದರ್ಶನದ ಮೂಲಕ ಈ ಕಾರ್ಯಕಲಾಪಗಳು ಯಾವ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದನ್ನು ಈ ವಿಶೇಷವಾದಂತಹ ಸಮಯದಲ್ಲಿಯಾದರೂ ನಾಡಿನ ಜನರು ನೋಡಬೇಕು, ವಿಶೇಷವಾಗಿ ನಗರದ ಜನರು ನೋಡಬೇಕೆಂದು ಈಗ ಇರುವಂತಹ ವ್ಯವಸ್ಥೆಯಲ್ಲಿ ಎಂದು. ನಾವು ಪ್ರತಿಪಕ್ಷದಲ್ಲಿ ಕುಳಿತುಕೊಂಡು ನಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು, ಬಜೆಟ್ ಮಂಡನೆಗೆ ಅಡ್ಡಿಯೂ ಕೂಡ ಆಗಬಾರದು, ಆದರೆ ನಮ್ಮ ನೋವೂ ಸಹ ಈ ರಾಜ್ಯದ ಜನತೆಗೆ ಗೊತ್ತಾಗಬೇಕು ಎನ್ನುವಂತಹ ಉದ್ದೇಶ ಇತ್ತು. ಆದರೆ ಬಜೆಟ್‌ನ ಪ್ರಾವಿತ್ರತೆಯೇ ಹೊರಟು ಹೋಗಿದೆ, ತೆರಿಗೆ ಮೈಮೇಲೆ ತೆರಿಗೆಯನ್ನು ಹಾಕಿದ್ದೀರಿ ಒಂದು ಕಾಲದಲ್ಲಿ 50-60 ಕೋಟಿ ತೆರಿಗೆಯನ್ನು ಹಾಕಿದ್ದರೆ ಇಡೀ ರಾಜ್ಯದಲ್ಲಿ ಬೊಬ್ಬೆಯನ್ನು ಹಾಕುತ್ತಿದ್ದಂತಹ ಕಾಲ ಇತ್ತು. 600-700 ಕೋಟಿ ವಿದ್ಯುತ್ ದರ ಜಾಸ್ತಿಯಾಯಿತು. ಸದನ ಸೇರುತ್ತದೆಂದು ಗೊತ್ತಿದ್ದರೂ ಸಹ ಇದ್ದಕ್ಕಿದ್ದಂತೆ ಸಾರಿಗೆ ದರ ಜಾಸ್ತಿಯಾಯಿತು. ಅದುದರಿಂದ ಈ ಬಜೆಟ್‌ನ ಪಾವಿತ್ರ್ಯತೆ ಏನೆಂದು ನಾವು ಪ್ರತಿಭಟನೆಯನ್ನು ಮಾಡಿದ್ದೆವು. ನಮ್ಮ ಕಾಂಗ್ರೆಸ್ ಪಕ್ಷದ ಮಿತ್ರರು ಅವರದೇ ಆದ್ದಂತಹ ರೀತಿಯಲ್ಲಿ ಪ್ರತಿಭಟನೆಯನ್ನು ಮಾಡಿದರು. ಆದರೆ ಒಂದುಕ್ಷಣ ಸಹ ಯಾವ ಕಾರಣಕ್ಕಾಗಿ ಒಂದು ಪ್ರತಿಪಕ್ಷದ ಕಾಂಗ್ರೆಸ್ ಮಿತ್ರರು ಸಭಾತ್ಯಾಗವನ್ನು ಮಾಡಿದರು, ಬಿ.ಜೆ.ಪಿ. ಸದಸ್ಯರು ಸದನದಲ್ಲಿ ನಮ್ಮದೇ ಆದ್ದಂತಹ ರೀತಿಯಲ್ಲಿ ಪ್ರತಿಭಟನೆಯನ್ನು ಮಾಡಿದ್ದವು, ಇದನ್ನು ನಾನು ಎದ್ದು ನಿಂತುಕೊಂಡು ಈ ಕಡೆ ಸ್ವಲ್ಪ ಕ್ಯಾಮರಾ ತಿರುಗಿಸಪ್ಪಾ ಎಂದು ಹೇಳಬೇಕಾಯಿತು, ಆದರೂ ಸಹ ಕ್ಯಾಮರವನ್ನು

ತಿರುಗಿಸಲಿಲ್ಲ. ಆದರೆ ಮೂಲಭೂತವಾಗಿ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಗಿಂತ ನನ್ನ ದೃಷ್ಟಿಯಲ್ಲಿ ಪ್ರತಿಪಕ್ಷಕ್ಕೆ ದೊಡ್ಡ ಜವಾಬ್ದಾರಿಯು ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ನನಗೆ ಇತ್ತಿಚೆಗೆ ಅನ್ನಿಸುತ್ತಿರುವುದು ದೂರದರ್ಶನದಲ್ಲಿ ಉಂಟಾದಂತಹ ಕೊರತೆ ಅದಕ್ಕೆ ನಾವು ಹಕ್ಕುಚ್ಯುತಿ ಮಂಡನೆಯನ್ನು ಮಾಡಿದ್ದೇವೆ, ಅದನ್ನು ರೆಫರ್ ಮಾಡುತ್ತೀರಿ ಎನ್ನುವಂತಹ ವಿಶ್ವಾಸ ನಮಗೆ ಇದೆ. ಅದಕ್ಕಿಂತಲೂ ಹೆಚ್ಚಾಗಿ ನಾವು ಇಲ್ಲಿ ಏನು ಮಾಡುತ್ತಿದ್ದೇವೆ? ಬುದ್ದಿವಂತಿಕೆಯ ಪ್ರದರ್ಶನಕ್ಕೆ ಇರುವಂತಹ ಸ್ಥಳವೆಂದು ಅನೇಕರು ಭಾವಿಸಿಕೊಂಡಿದ್ದೇವೆ. ನಾನು ಹೇಳುವಂತಹ ಒಂದೊಂದು ಮಾತೂ ಸಹ ನನ್ನ ಕ್ಷೇತ್ರ, ನಮ್ಮ ರಾಜ್ಯದ, ಜನರ ಮನಸ್ಸಿನಲ್ಲಿರುವಂತಹ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಬಂದಿರುವಂತಹ ಅವರ ಪ್ರತಿನಿಧಿ ಎನ್ನುವಂತಹ ಅರಿವೇ ಮರೆತು ಹೋಗಿದೆ. ಹೀಗಾಗಿ ಆಡಳಿತ ಪಕ್ಷ ಏನೇ ಮಾಡಿದರೂ ವಿರೋಧ ಮಾಡುವುದು ಎನ್ನುವಂತದ್ದು ವಿರೋಧ ಪಕ್ಷದ ಕಡೆ. ವಿರೋಧ ಪಕ್ಷಗಳು ಈ ಸರ್ಕಾರದ ಬೊಕ್ಕಸವನ್ನು ತುಂಬಿಸಬೇಕು ಜನತೆಗೆ ಒಳ್ಳೆಯ ಆಡಳಿತವನ್ನು ಕೊಡಬೇಕೆಂದು ಯಾವುದೇ ಸಲಹೆಯನ್ನು ಕೊಟ್ಟರೂ ಅವು ಈ ಕಡೆಯಿಂದ ಬಂದಿದೆ ಎಂದು ತಿರಸ್ಕಾರವನ್ನು ಮಾಡುವುದು. ಇದು ದಿನೇ ದಿನೇ ಜಾಸ್ತಿಯಾಗುತ್ತಿದೆ. ಒಂದು ರಾಜಕೀಯ ಕನ್ನಡಕವನ್ನು ಹಾಕಿಕೊಂಡೇ ನೋಡುವಂತಹ ಪ್ರವೃತ್ತಿಯು ಬೆಳೆಯುತ್ತಿದೆ. ಖಂಡಿತ ಈಗಾಗಲೇ ಜನತೆ ಈ ಪ್ರಜಾತಂತ್ರದಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುತ್ತಿದೆ. ಈ ರೀತಿಯ ಕಾರ್ಯಕಲಾಪಗಳನ್ನು ನೋಡುವುದರಿಂದ, ವರದಿಯಾಗುವುದರಿಂದ, ಬಹುಶಃ ಆಡಳಿತ ಪಕ್ಷದ ಬಗ್ಗೆ ಮತ್ತು ವಿರೋಧ ಪಕ್ಷಗಳ ಬಗ್ಗೆ ವಿಶ್ವಾಸವನ್ನು ಕಳೆದುಕೊಂಡು, ಯಾರ ಬಗ್ಗೆ ಯಾರಿಗೂ ವಿಶ್ವಾಸ ಇಲ್ಲ ಎನ್ನುವಂತಹ ಪರಿಸ್ಥಿತಿಯೂ ಬಂದಿದೆ. ಶಾಸಕರ ಬಗ್ಗೆ ತಾವೇ ಅನೇಕ ಚುನಾಯಿತ ಪ್ರತಿನಿಧಿಗಳಾಗಿ ನಮಗೇನಾದರೂ ಜವಾಬ್ದಾರಿಯು ಇದೆಯಾ? ಅಧಿಕಾರಿಗಳು ಎಷ್ಟೆಂದು ನಿರ್ಲಕ್ಷ್ಯವಾಗಿ ಕಾಣುತ್ತಾರೆ. ಇದು ಬರುತ್ತಾ ಬರುತ್ತಾ ನಮ್ಮ ನಿಮ್ಮ ಸಂಘರ್ಷ ಎಲ್ಲಿಗೆ ಬಂದಿದೆ. ಎಂದರೆ ಜನರಿಗೆ ನ್ಯಾಯವನ್ನು ಒದಗಿಸುವ ಬದಲಾಗಿ, ಚುನಾಯಿತ ಪ್ರತಿನಿದಿಗಳನ್ನೇ ತುಂಬಾ ಹಗುರವಾಗಿ ಅಧಿಕಾರಿಗಳು ನೋಡುತ್ತಿದ್ದಾರೆ. ಮತ್ತೆ ಯಾವುದೇ ಕೆಲಸಕ್ಕೂ ಕೂಡ ಇನ್ನೊಬ್ಬನ ಶಿಫಾರಸ್ಸು ಇಲ್ಲದೇ ಯಾವುದೇ ಕೆಲಸಗಳು ಆಗದೇ ಇರುವಂತಹ ಪರಿಸ್ಥಿತಿ ಇದರ ಮಧ್ಯೆ ಅಧಿಕಾರಿಗಳಿಗೆ ನಾನು ಏನು ಮಾಡಿದರೂ ನಡೆಯುತ್ತದೆ ಎನ್ನುವುದು ಮನಸ್ಸಿಗೆ ಬರುತ್ತಿರುವಂಥದ್ದು. ಖಂಡಿತ ನಾನು ಹೇಳುವುದೇನೆಂದರೆ, ಇದೆಲ್ಲವೂ ಕೂಡ ಈ ಮಾಧ್ಯಮದ ಮೂಲಕ ಪ್ರಕಟವಾಗಬೇಕು ಎನ್ನುವುದು. ಈ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಇದಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟಿದ್ದೇವೆ. ಅದಕ್ಕಾಗಿ ಪತ್ರಿಕಾರಂಗಕ್ಕೂ ಇಷ್ಟೇ ಒಂದು ದೊಡ್ಡ ಪ್ರಾವಿತ್ರ್ಯತೆಯನ್ನು ಇಟ್ಟುಕೊಂಡಿದ್ದೇವೆ. ಜನ ಇವೊತ್ತು ನಂಬಿದ್ದಾರೆ. ಅನಿರೀಕ್ಷಿತವಾಗಿ ತಾವೂ ಸಹ ವ್ಯಕ್ತಪಡಿಸಿದ್ದೀರಿ. ಕಾರ್ಯಾಂಗ,

ಶಾಸಕಾಂಗದ ಬಗ್ಗೆ ಇಷ್ಟೊಂದು ವಿಶ್ವಾಸ ಕಡಿಮೆಯಾಗಿದೆ. ಪ್ರತಿ ಒಂದನ್ನೂ ನ್ಯಾಯಾಂಗದ ಕಡೆಗೆ ನೋಡುವುದು. ನ್ಯಾಯಾಂಗಕ್ಕೆ ಅವರು ಏಕೆ ಹೋದರು. ಏಕೆ ಇಂತಹ ಪರಿಸ್ಥಿತಿಯನ್ನು ತಂದೆವು ? ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸದೇ ಇದ್ದಾಗ ಎಲ್ಲದ್ದಕ್ಕೂ ನ್ಯಾಯಬೇಕೆಂದು ನ್ಯಾಯಾಂಗಕ್ಕೆ ಹೋಗುವಂತಹ ಪರಿಸಿತ್ಥಿಯೂ ಏನಿದೆ, ಈ ಪ್ರಜಾತಂತ್ರದ ವ್ಯವಸ್ಥೆಗೇ ಕೊಡಲಿ ಪೆಟ್ಟು ಹಾಕುತ್ತಿದ್ದೇವೇನೋ ಎನ್ನುವಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಮತ್ತೆ ಎಲ್ಲದ್ದಕ್ಕೂ ಒಂದು ಸಾರಿ ನಾವು ಎಷ್ಟೊಂದು ಕಷ್ಟಪಟ್ಟು ಒಂದು ಸಂಗತಿಯನ್ನು ತಿಳಿಸಿದರೆ ಅದನ್ನು ತಿದ್ದುಕೊಂಡು, ಸರಿಪಡಿಸಿ, ನ್ಯಾಯವನ್ನು ಒದಗಿಸಿ ಕೊಡಬೇಕು ಎನ್ನುವುದು ಮರತೇ ಹೋಗಿದೆ. ಎಲ್ಲಾ ಉಪದೇಶವನ್ನು ಹೇಳುದಕ್ಕೆ ಇರುವಂಥದ್ದು, ಮತ್ತು ಚರ್ಚೆಯಾದಂತಹ ದಿವಸವೇ ಇಲ್ಲಿಯೇ ಮರೆತು ಬಿಟ್ಟು ಅಮೇಲೆ ಹೇಳಿದಂಥದ್ದನ್ನು ಯಾವುದನ್ನೂ ಕಾರ್ಯಗತಕ್ಕೆ ತರುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿಯನ್ನು ನೋಡಿದ್ದೇವೆ. ಇವೊತ್ತು ಅಂತೂ ಬಹಳ ನೊಂದಿದ್ದೇವೆ. ಬಹುಶಃ ನಾವು ಎಕ್ಸೈಸ್ ಮಾಡಿ, ಏನೇನೋ ಸಂಗ್ರಹವನ್ನು ಮಾಡಿ ಇಲ್ಲಿ ಸರ್ಕಾರದ ಗಮನಕ್ಕೆ ತರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಅನುಕೂಲವಾಗಬಹುದು, ತಿದ್ದುಕೊಳ್ಳಬಹುದು ಅಲ್ಲಿ ಖಜಾನೆಯೂ ತುಂಬಬಹುದೆಂದು ನಾವು ಏನು ಕೆಲಸವನ್ನು ಮಾಡುತ್ತಿದ್ದೇವೆ ಅದು ವ್ಯರ್ಥ. ಜೀವನದಲ್ಲಿ ಇದೊಂದು ನಾಟಕ ಕಂಪನಿ. ನಾನು ಹೇಳುತ್ತೇನೆ ದಯಮಾಡಿ ಕ್ಷಮಿಸಬೇಕು. ನಿಜವಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸಲಿಕ್ಕೆ ನಾವು ಇಲ್ಲಿಗೆ ಬಂದಿದ್ದೇವೆ. ಐದು ವರ್ಷ ಇರಬೇಕು ಮತ್ತೆ ಚುನಾವಣೆ ಹೋಗಬೇಕು. ಈಗ ಏನೋ ತಾತ್ಕಾಲಿಕವಾಗಿ ಕೆಲಸಕಾರ್ಯಗಳು ನಡೆಯುತ್ತಿವೆಯೇ ಹೊರತು, ಮೂಲಭೂತವಾಗಿ ಯಾವ ಬದಲಾವಣೆಯೂ ಆಗಿಲ್ಲ. ಇನ್ನೊಮ್ಮೆ ನಾವು ಗೆದ್ದು ಬರದೇ ಇದ್ದರೂ ಸಹ ಪರವಾಗಿಲ್ಲ. ಇನ್ನೊಮ್ಮೆ ನಾನು ಶಾಸಕ ಆಗದೇ ಇದ್ದರೂ ಪರವಾಗಿಲ್ಲ. ಇಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗದರೆ ಅದರ ಪರಿಣಾಮಗಳು ಏನಾಗುತ್ತದೆ. ಅದರ ಮೇಲೆ ಎಷ್ಟು ಹೊಡೆತ ಬೀಳುತ್ತದೆ ಎನ್ನುವ ಅರಿವು ಇದ್ದು ಸಹ ಪ್ರಸ್ತಾಪವನ್ನು ಮಾಡುತ್ತಿದ್ದೇವೆ. ಆದರೆ ಆ ಪ್ರಮುಖವಾದಂತಹ ವಿಷಯಗಳೇ ಕೆಲವು ಸಂದರ್ಭದಲ್ಲಿ ಬರುವುದಿಲ್ಲ. ಇನ್ನೊಂದು ಮಾತು ಇಲ್ಲಿ ಬಂತು, ಅದು ಏನೆಂದರೆ, ಅಭಿವ್ಯಕ್ತಿ ಸ್ವಾತಂತ್ರ್ಯ. ಅಂದರೆ ನನಗೆ ಇದು ಅರ್ಥವಾಗಲಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ ಯಾವುದನ್ನು ಹೇಗೆ ಬೇಕಾದರೂ ತಿರುಚಿ ಬುದ್ದಿವಂತಿಕೆಯನ್ನು ಪ್ರದರ್ಶನ ಮಾಡುವಂಥದ್ದು. ಖಂಡಿತ ಕೆಲವು ವಿಷಯಗಳಲ್ಲಿ ಇದು ಆಗಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯ ಇರಬೇಕು. ನಮ್ಮ ಅಪ್ಪ, ಅಮ್ಮನ ವಿಳಾಸವನ್ನೇ ಬದಲಾಣೆಯನ್ನು ಮಾಡುತ್ತೀರಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವ್ಯಕ್ತಪಡಿಸುವಂತಹ ಕಾಲದಲ್ಲಿ ಅನೇಕ ವರ್ಷಗಳಿಂದ ಯಾವುದೋ ಒಂದು ನಂಬಿಕೆ ವಿಶ್ವಾಸವನ್ನು ಉಳಿಸಿಕೊಂಡು ಬಂದಿದ್ದೇವೆ. ಏನೋ ಜನರು ನಂಬಿದ್ದಾರೆ. ಅದಕ್ಕೆ

ಕೊರತೆಯನ್ನು ಮಾಡುವಂಥದ್ದು, ಅದಕ್ಕೆ ಧಕ್ಕೆಯನ್ನು ತರುವಂಥದ್ದು ಇದನ್ನು ಸಹಿಸಿಕೊಳ್ಳಬೇಕು ಎಂದು ಹೇಳುವುದಾದರೆ, ಮೊನ್ನೆ ಬಹುಶಃ ಸ್ನೇಹಿತರು ಒಂದು ಪುಸ್ತಕವನ್ನು ಹೇಳಿ 300-350 ರೂಪಾಯಿಗಳನ್ನು ಫಿಕ್ಸ್ ಮಾಡಿ..

ಅಧ್ಯಕ್ಷರು : ಬೇಡ ಅದರ ಮೇಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರೇ ಅದರ ಮೇಲೆ ಕಂಟ್ರಾವರ್ಸಿ ಬೇಡ ಆ ವಿಷಯ ಮುಗಿದಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪವನ್ನು ಮಾಡುವುದಿಲ್ಲ ನನ್ನ ಅಭಿಪ್ರಾಯ ಏನೆಂದರೆ ಎಲ್ಲದ್ದಕ್ಕೂ ಸಹ ಇತಿಮಿತಿ ಇದೆ ಎಂದು. ಅಲ್ಟಿಮೆಟ್ ಆಗಿ ಜನರು ತೀರ್ಮಾನವನ್ನು ಮಾಡುತ್ತಾರೆ ಅದು ಬೇರೆ ವಿಷಯ. ಸ್ವಾತಂತ್ರ್ಯ ಇದೆ ಎಂದು ಏನೇನೋ ಮಾಡುವುದಕ್ಕೆ ಬರುವುದಿಲ್ಲ. ನಮಗೆ ಇಲ್ಲಿ ಸ್ವಾತಂತ್ರ್ಯ ಇದೆ ಎಂದು ಬೇರೆಯವರಿಗೆ ನೋವಾಗದಂತೆ ಎಚ್ಚರವನ್ನು ವಹಿಸಬೇಕು ಎನ್ನುವುದರ ಬಗ್ಗೆ ನನ್ನದು ಏನು ಎರಡು ಮಾತು ಇಲ್ಲ. ಈ ಮಾತನ್ನು ಹೇಳುತ್ತಾ, ನಾವು ಆ ದಿವಸ ದೂರದರ್ಶನದವರನ್ನು ನೋಡಿದ್ದೆವು. ಆ ದಿವಸ ವಾಟಾಳ್ ನಾಗರಾಜ್‌ರವರು ನಾವೆಲ್ಲಾ ಏಕೆ ಈ ದೂರದರ್ಶನದವರು ಈ ರೀತಿಯಾಗಿ ಮಾಡುತ್ತಿದ್ದಾರೆಂದು ಮಾತನಾಡಿಕೊಂಡೆವು ಈ ರೀತಿಯ ಅನೇಕ ಪ್ರಸಂಗಗಳಲ್ಲಿ ನಮಗೆ ಕಹಿ ಅನುಭವವಾಗಿದೆ. ಅದಕ್ಕೋಸ್ಕರವಾಗಿ ಇದನ್ನು ಹಕ್ಕುಚ್ಯುತಿ ನಿರ್ಣಯದ ಸಮಿತಿಗೆ ರೆಫರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರು, ವಿರೋಧ ಪಕ್ಷದ ನಾಯಕರು, ಶ್ರೀ ಮಾನ್ಯ ಬಿ. ಎಸ್.ಯಡಿಯೂರಪ್ಪನವರು, ಶ್ರೀ ಶ್ರೀರಾಮರೆಡ್ಡಿಯವರು, ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಇತರ ಸ್ನೇಹಿತರುಗಳು ಕಳುಹಿಸಿಕೊಟ್ಟಿರತಕ್ಕಂತಹ ನಿರ್ಣಯದ ಪ್ರತಿ ನನ್ನ ಬಳಿ ಇದೆ.ತಮ್ಮಗಳ ವಾದವನ್ನೂ ಸಹ ಕೇಳಿದ್ದೇನೆ. ನಮ್ಮ ಸದನದ ಕಲಾಪ ಸಾಧ್ಯವಾದ ಮಟ್ಟಿಗೆ ಜನರಿಗೆ ನಿಕಟವಾದಂತಹ ಪರಿಚಯವನ್ನು ಮಾಡಿಸಬೇಕು ಎನ್ನುವ ದೃಷ್ಟಿಯಿಂದ ನಾನು ದೂರದರ್ಶನವರಿಗೆ ಪತ್ರವನ್ನು ಬರೆದು ಅವರಿಗೆ ಅವಕಾಶವನ್ನು ಕೊಟ್ಟು ಸಾಧ್ಯವಾದಮಟ್ಟಿಗೆ ಬಜೆಟ್ ಮಂಡನೆಯ ಪ್ರಸಾರವು ಬರಬೇಕು, ಪ್ರಶ್ನೋತ್ತರ ವೇಳೆಯ ಪ್ರಸಾರವಾಗಬೇಕೆಂದು ಪತ್ರವನ್ನು ಬರೆದಿದ್ದೆ. ಅದರೆ ಪ್ರಶ್ನೋತ್ತರ ವೇಳೆಗೆ ಇನ್ನೂ ಸಮಯ ಬೇಕೆಂದರು. ಇದರ ಮಧ್ಯೆ ಖಾಸಗಿಯವರು ಬಂದು ಕೇಳಿದಾಗಲೂ ಸಹ ನಾನು ಎಲ್ಲರಿಗೂ ಕೂಡ ಯಾವ ನಿರ್ಬಂಧನೆಯನ್ನು ಹಾಕದೇ ಅವಕಾಶವನ್ನು ಕೊಟ್ಟೆ. ಪ್ರತಿದಿವಸ ಸಿಟಿ ಕೇಬಲ್ ನಮ್ಮವರದಿಯನ್ನು ಲೈವ್ ರಿಲೇಯನ್ನೇ ಮಾಡುತ್ತಿದ್ದಾರೆ. ತಾವು ಏನು ಭಾವನೆಗಳನ್ನು

ವ್ಯಕ್ತ ಮಾಡಿದ್ದೀರಿ ಅದನ್ನೂ ಕೂಡ ನಾನು ಅರ್ಥ ಮಾಡಿಕೋಂಡಿದ್ದೇನೆ. ಎಲ್ಲಿ ಹೆಚ್ಚು ಕಡಿಮೆಯಾಗಿದೆ ಎನ್ನುವುದನ್ನು ತಿಳಿದುಕೊಂಡು ನಾನು ಇದರ ಮೇಲೆ ಕ್ರಮವನ್ನು ತೆಗೆದು ಕೊಳ್ಳುತ್ತೇನೆ ಎನ್ನುವುದಕ್ಕೆ ಸ್ವಲ್ಪ ನಾನು ಅಲೋಜನೆಯನ್ನು ಮಾಡಬೇಕಾಗಿದೆ. ಅದಕ್ಕಾಗಿ ನಾನು ತನ್ನ ತೀರ್ಪನ್ನು ಈ ವಿಚಾರದಲ್ಲಿ ಕಾಯ್ದಿರಿಸಿದ್ದೇನೆ ನಾನು ಮತ್ತೇ ಸದನ ಸೇರಿದಾಗ ತಮ್ಮ ಗಮನಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೇನೆಂದು ತರುತ್ತೇನೆ. ಈ ಒಂದು ಪ್ರಕಟಣೆ ಇದೆ.

ಅಧ್ಯಕ್ಷರು : ಹತ್ತನೇ ವಿಧಾನ ಸಭೆಯ ಆರನೇ ಅಧಿವೇಶನವು ಇಲ್ಲಿಯವರೆಗೆ ನಡೆಸಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದೆ ಮಂಡಿಸಬಯಸುತ್ತೇನೆ.

ಮಂಗಳವಾರ ದಿನಾಂಕ : 11ನೇ ಫೆಬ್ರವರಿ, 1997ರಂದು ಪ್ರಾರಂಭವಾದ ಆರನೇ ಅಧಿವೇಶನವು 13 ದಿನಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿತು. ಹಾಗೂ ಸೋಮವಾರ, 17ನೇ ಮಾರ್ಚ್ 1997ರಂದು ಪ್ರಾರಂಭವಾದ ಆರನೇ ಮುಂದು ವರದಿ ಅಧಿವೇಶನವು 9 ದಿನಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿದೆ.

ಸದನವು 114 ಘಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿರುತ್ತದೆ.

ಇತ್ತೀಚೆಗೆ ನಿಧನರಾದ 23 ಗಣ್ಯರುಗಳ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ 2016 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 240 ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಹಾಗೂ 1481 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

117 ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿ, ಆ ಪೈಕಿ 19 ಗಮನ ಸೆಳೆಯುವ ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆಯನ್ನು ನೀಡಿರುತ್ತಾರೆ.

ಅರ್ಧ ಘಂಟೆ ಕಾಲವಧಿ ಚರ್ಚೆಗೆ 6 ಸೂಚನೆಗಳನ್ನು ಸ್ವೀಕರಿಸಲಾಗಿದ್ದು ಆ ಪೈಕಿ 3ನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ನಿಯಮ 351ರ ಅಡಿಯಲ್ಲಿ 105 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ 41 ಸೂಚನೆಗಳಿಗೆ ಸಂಬಂಧಿಸಿದ ಮಂತ್ರಿಗಳು ಹೇಳಿಕೆ ನೀಡಿರುತ್ತಾರೆ.

ಖಾಸಗಿ ಸದಸ್ಯರ ಒಂದು ನಿರ್ಣಯವನ್ನು ಸ್ವೀಕರಿಸಿದ್ದದು, ಅದನ್ನು ಚರ್ಚೆಗೆ ತೆಗೆದುಕೊಂಡಿರುವುದಿಲ್ಲ.